**KARNATAKA LOKAYUKTA**

No.UPLOK-2/DE/777/2017/ARE-16
*(Encl: Recommendation & original Report of Inquiry Officer with connected records)*

Dr.B.R.Ambedkar Veedhi,
Multi Storied Building,
Bengaluru,
dated: 09/12/2020.

**To,**

Smt.Uma Mahadevan I.A.S.,
Principal Secretary to Government,
Rural Development &
Panchayath Raj Department,
M.S.Building,
Bengaluru – 560001.

Respected Madam,

**Sub :** Departmental inquiry against Sri.Prasad, Secretary, Kalkunte Grama panchayathi, Hoskote Taluk, Bengaluru Rural Dist and Smt.H.C.Shruthi Panchayath Development Officer, Kalkunte Grama Panchayathi, Hoskote Taluk, Bengaluru Rural District. reg.

**Ref :** Government Order No GraAAPA 490 Gra pam kA 2017, Bengaluru Dated 09.06.2017

*****

With Reference to the above, I am directed to forward herewith the recommendation of Hon'ble Uplokayukta, State of Karnataka, dated 09.12.2020 along with the report of inquiry Officer and relevant records as noted below:

**INDEX**

| Sl. No. | Particulars of Documents | Page Nos. |
|---|---|---|
| | Recommendation dated 09/12/2020 of Hon'ble Upalokayukta along with inquiry report | One sealed cover |
| **File 1** | Order Sheet File (Original). | 1-17 |

| | | |
|---|---|---|
| **File 2** | **Documents containing :**<br>I. 12(3) report of Hon'ble Upalokayukta-II, dated: 03/05/2017 (xerox). | 18-21 |
| | II.Government Order No. ಗ್ರಾಅಪ 490 ಗ್ರಾಪಂಕಾ 2017, ಬೆಂಗಳೂರು, ದಿನಾಂಕ 09/06/2017. (xerox). | 22-24 |
| | III. Nomination order No: Uplok-2/DE/777/2017 Bengaluru, dated: 16/06/2017 of Hon'ble Upalokayukta-II, Bangalore (Xerox) | 25-26 |
| | IV. Articles of charges dtd.11/08/2017, (Original) | 27-31 |
| | V. First Oral Statement of DGO-1 dtd:03/10/2017, (original) | 32 |
| | VI. First Oral Statement of DGO-2 dtd:16/12/2017, (original) | 33 |
| | VII. Written statement of DGO-1 dt.16/12/2017, pages (original) | 34-37 |
| | VIII. Written statement of DGO-2 dt.31/03/2018, (original) | 38-42 |
| | IX. Second oral statement of DGO-1 and DGO-2 Dt16/12/2019, (original) | 43-44 |
| | X. Written arguments of DGO-2, dt.27/11/2020 (Original 45 to 55 xerox 56 & 57) | 45-57 |
| | XI. Written arguments of DGO-1, dt.30/11/2020 (Original 58 to 61 Xerox 62 to 83) | 58-83 |
| **File 3** | **Witness examined on behalf of the Disciplinary Authority** | |
| | **PW-1**: Sri.Shankar, dt. 06/08/2019 (original) | 84-89 |
| **File 4** | **Witness examined on behalf of the DGO** | |
| | **DW-1:** Sri. **Prasad,** Secretary, Kalkunte Grama panchayathi, Hoskote Taluk, Bengaluru Rural District dated: 05/02/2020. (Original) | 90-96 |
| | **DW-2:** Sri. Smt.**H.C. Shruthi**, Panchayath Development Officer, Kalkunte Grama Panchayathi, Hoskote Taluk, Bengaluru Rural District dated: 23/11/2020. (Original) | 97-112 |
| **File 5** | **Documents marked on behalf Disciplinary Authority (Ex.P1 to Ex.P.10)** | |
| | **Ex.P-1:** Complaint of complainant dated 31/10/2014 (Xerox) | 113 |
| | **Ex.P-2:** Form No. I (Complaint) dated 31/10/2014 (Original). | 114-115 |
| | **Ex.P-3 :** Form No. II (Affidavit) dated 31/10/2014 (Original). | 116 |
| | **Ex.P-4:** Letter (complaint) of complainant addressed to Executive Officer, Taluk Panchayath, Bengaluru Rural District (xerox). | 117 |
| | **Ex.P-5:** DGO-2 addressed a letter to Executive Officer, Taluk Panchayath, Hoskote regarding | 118 |

| | | |
|---|---|---|
| | fake khatha (Xerox) | |
| | **Ex.P-6**: Information Under RTI regarding the entries of private persons in the Panchayath demand register obtained 20 sheets (Xerox) | 119-138 |
| | **Ex.P.7:** Pahani Pathrike of Sy. No. 101/2 (Xerox) | 139 |
| | **Ex.P.8:** Phani Pathrike of Sy. 101/3 (Xerox) | 140 |
| | **Ex.P.9**: Rejoinder of complainant (original) | 141 |
| | **Ex.P.10**: Government circular dated: 04/01/2013 regarding controlling of illegal properties registration in Gram Panchayath Limits (6sheets). (Xerox) | 142-147 |
| **File 6** | **Documents marked on behalf of the DGOs** | |
| | **Ex. D-1 :** Official Memorandum dated: 20/07/2011 of Executive Officer, regarding report of duty on 20/07/2011 A/N. ( Xerox ) | 148-152 |
| | **Ex. D-2 :** Certified copy of the resolution passed on 08/08/2011 (4 sheets). (Certified copy) | 153-156 |
| | **Ex. D-3 :** Certified copy of the resolution passed on 09/03/2012 regarding power issued to Secretary regarding issue of copy of khatha (8 sheets). (Certified copy) | 157-164 |
| | **Ex.D-4:** Certified copy of the resolution passed on 08/08/2011 in page no. 13 PDO herself written shara and signed it (13 sheets). (Certified copy) | 165-177 |
| | **Ex. D-5:** House Tax receipt dated:02/05/2012 in the name of B.Raju, C.M. Krishnamurthy and P. Lakshminarayana. (xerox copy) | 178 |
| | **Ex. D-6:** Certified certificate dated: 02/08/2012 issued by DGO-2 regarding disputed site No. 26 of Arehalli village. (Xerox copy) | 179-180 |
| | **Ex. D-7:** DGO-2 issued From No.12 in respect of B.Raju, C.M. Krishnamurthy and P. Lakshminarayana. (Xerox copy) | 181-182 |
| | **Ex. D-8:** Certified copy of the stock register extract showing at sl. No. 18 the Tax receipt Book bearing No. 15268 is with DGO-2 (3 sheets ) ( Certified Xerox copy) | 183-185 |
| | **Ex. D-9:** Certified xerox copy of the Audit report for the year 2012-13 pertains to Kalkunte Agrahara Gram Panchayath (4 Sheets ) ( Certified copy) | 186-189 |
| | **Ex. D-10:** Certified copy of the letter dated: 27/03/2012 issued by PDO to Secretary regarding power issued to Secretary and to | 190 |

| | | |
|---|---|---|
| | work within the Frame work of Law. (Certified copy) | |
| | **Ex. D-11:** Government order dated: 04/01/2012 regarding distribution of work to PDO and Secretaries. (Xerox copy) | 191-193 |
| | **Ex. D-12:** Certified copy of the letter dated: 18/01/2013 issued by EO, Taluk Panchayath, Hosakote addressed to President Kalkunte Gram Panchayath. (Certified copy) | 194 |
| | **Ex. D-13:** Certified copy of the Enquiry Notice dated: 07/08/2014 of EO, Taluk Panchayath, Hosakote issued to PDO, Kalkunte Gram Panchayath regarding forged signature of PDO. (Certified copy) | 195 |
| | **Ex. D-14:** Certified copy of the proceedings of General body meeting dated 08.08.2011 of Kalkunte Gram Panchayath resolution regarding issue of Khatha to 86 sites at Sy. No. 100 and 101. (Xerox copy)<br><br>**Ex. D-14(a)**: In page 3 of the resolution dated 08.08.2011 of Kalkunte Gram Panchayath DGO-2 informed that issuing khatha to 86 sites at Sy. No. 100 and 101 is illegal, the shara at page No.3. (Xerox copy) | 196-199<br><br>200-203 |
| | **Ex. D-15:** Certified copy of the resolution of General body meeting dated 09.03.2012 of Kalkunte Gram Panchayath regarding the power vested to Secretary to issue of Khatha (Xerox copy)<br><br>**Ex. D-15(a):** Certified copy of resolution dated 09.03.2012 in subject No. 9 the shara regarding the power vested to Secretary to issue of khatha. (Xerox copy) | 204-208<br><br>209-219 |
| | **Ex. D-16:** Certified copy of the letter written by DGO-2 to Executive Officer, Taluk Panchayath, Hoskote dated 08.07.2014 regarding issue of Form No. 1 and 12 (09 and 11) by forging her signature. (Xerox certified copy) | 220 |
| | **Ex. D-17:** Comments of DGO-2 dated 22/10/2016. (Original) | 221 |
| | **Ex. D-18:** Certified copy of the resolution 12.07.2017 of Kalkunte Gram Panchayath regarding cancelation of khatha in Sy. No. 3, 101/2 and 101/3 without conversion of land. | 222-225 |

| | | |
|---|---|---|
| | (Certified copy)<br><br>**Ex. D-18(a):** Certified copy of the letter dated 03.11.2017addressed to Executive Officer, Taluk Panchayath, Hoskote by DGO-2 stating that in General Body meeting resolution is passed for cancellation of khathas (Certified copy) | 226 |
| | **Ex. D-19:** Certified copy of the letter dated 02.11.2017addressed to Executive Officer, Taluk Panchayath, Hoskote by CEO, Bengaluru Rural Zilla Panchayath to take appropriate action against DGO-1 and to cancel the khathas. (Certified copy) | 227 |
| | **Ex. D-20:** Certified copy of the resolution dated 18.09.2018 regarding without conversion of land, the khathas pertains to Harehally Sy. No. 03, 101/2 and 101/3 have been cancelled. (Certified copy) | 228-249 |

Kindly acknowledge the receipt of the above said documents.

Yours faithfully,

(Usharani)
Registrar,
Karnataka Lokayukta,
Bengaluru.

Copy to the Addl.Registrar of Enquiries-16, Karnataka Lokayukta, Bengaluru., for information and further necessary action.

# KARNATAKA LOKAYUKTA

No:UPLOK-2/DE/777/2017/ARE-16

Multi Storied Building,
Dr. B.R. Ambedkar Veedhi,
Bengaluru-560 001.
Dated 09.12.2020.

## RECOMMENDATION

Sub:- Departmental inquiry against (1) Shri Prasad, Secretary, and (2) Smt. H.C.Shruthi, Panchayath Development Officer, Kalkunte Grama Panchayath, Hoskote Taluk, Bangalore Rural District - reg.

Ref:- 1) Government Order No. RDP 490 GPS 2017 dated 09.06.2017.

2) Nomination order No. UPLOK-2/DE/777/2017 dated 16.06.2017 of Upalokayukta, State of Karnataka.

3) Inquiry report dated 08.12.2020 of Additional Registrar of Enquiries-16, Karnataka Lokayukta, Bengaluru.

~~~~~

The Government by its order dated 09.06.2017 initiated the disciplinary proceedings against (1) Shri Prasad, Secretary, and (2) Smt. H.C.Shruthi, Panchayath Development Officer, Kalkunte Grama Panchayath, Hoskote Taluk, Bangalore Rural District, [hereinafter referred to as Delinquent Government Officials, for
~~~~~

short as ' DGOs 1 and 2' respectively] and entrusted the departmental inquiry to this Institution.

2. This Institution by Nomination Order No. UPLOK-2/DE/777/2017 dated 16.06.2017 nominated Additional Registrar of Enquiries-11, Karnataka Lokayukta, Bengaluru, as the Inquiry Officer to frame charges and to conduct departmental inquiry against DGOs for the alleged charge of misconduct, said to have been committed by them. Subsequently, by order No. Uplok-1&2/DE/Transfers/2019 dated 07.02.2019, Additional Registrar of Enquiries-16, Karnataka Lokayukta, Bengaluru, was re-nominated as the Inquiry Officer to continue the said departmental inquiry against the DGOs.

3. The DGO-1 Shri Prasad, Secretary, and DGO-2 Smt. H.C.Shruthi, Panchayath Development Officer, Kalkunte Grama Panchayath, Hoskote Taluk, Bangalore Rural District, were tried for the following charges :-

"ಒಂದನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ. ಪ್ರಸಾದ್ ಆದ ನೀವು, ಹೊಸಕೋಟೆ ತಾಲ್ಲೂಕಿನ ಕಲ್ಕುಂಟೆ ಗ್ರಾಮ ಪಂಚಾಯತಿಯಲ್ಲಿ ಕಾರ್ಯದರ್ಶಿಯಾಗಿ

ಮತ್ತು ಎರಡನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀಮತಿ. ಶ್ರುತಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹೊಸಕೋಟೆ ತಾಲ್ಲೂಕಿನ ಕಲ್ಕುಂಟೆ ಗ್ರಾಮ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸಿಕೊಂಡಿದ್ದ ಅವಧಿಯಲ್ಲಿ ಹೊಸಕೋಟೆ ತಾಲ್ಲೂಕಿನ ಅರೆಹಳ್ಳಿ ಗ್ರಾಮದ ಸರ್ವೆ ನಂಬರ್ 100, 101/2 ಮತ್ತು 101/3 ಇವುಗಳಲ್ಲಿ ಸದರಿ ಕೃಷಿ ಜಮೀನಿನ ಮಾಲೀಕರುಗಳು ಬಡಾವಣೆ ನಿರ್ಮಾಣ ಸಂಬಂಧ ಜಿಲ್ಲಾಧಿಕಾರಿಗಳ ಭೂಪರಿವರ್ತನಾ ಆದೇಶ ಅಥವಾ ಮಂಜೂರಾತಿ, ಬಿ.ಎಂ.ಆರ್.ಡಿ.ಎ ನಿಂದ ಮಂಜೂರಾತಿ ಹಾಗೂ ಸಂಬಂಧಪಟ್ಟವರಿಗೆ ಬಡಾವಣೆಯ ನಕ್ಷೆ ಇವುಗಳನ್ನು ಪಡೆದುಕೊಳ್ಳದೆ ಅಕ್ರಮವಾಗಿ ನಿರ್ಮಿಸಿರುವ ಬಡಾವಣೆಯನ್ನು ನಮೂನೆ 9 ಮತ್ತು 11 ರಂತೆ ಗ್ರಾಮ ಪಂಚಾಯತಿ ಕಛೇರಿಯಲ್ಲಿ ಮಾಹಿತಿಗಳನ್ನು ದಾಖಲಿಸುವುದರ ಮೂಲಕ ಸರ್ಕಾರಿ ನೌಕರರಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (i) ರಿಂದ (iii) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ."

4. The Inquiry Officer (Additional Registrar of Enquiries-16) on proper appreciation of oral and documentary evidence has held that, the above charges against DGO-1 Shri Prasad, Secretary, and DGO -2 Smt. H.C.Shruthi, Panchayath Development Officer, Kalkunte Grama Panchayath, Hoskote Taluk, Bangalore Rural District, are ' proved '.

5. On re-consideration of report of inquiry and all other materials on record, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Inquiry Officer.

6. As per the First Oral Statements of DGOs furnished by the Enquiry officer,

i) DGO-1 Sri M.Prasad is due for retirement on 30.6.2031 and

ii) DGO-2 Smt.H.C.Shruthi is due for retirement on 31-03-2043.

7. Having regard to the nature of charge proved against DGOs 1 and 2 and considering totality of circumstances, it is hereby recommended to the Government to impose penalty of withholding two annual increments payable to DGOs 1 and 2 Shri Prasad, Secretary, and Smt. H.C.Shruthi, Panchayath Development Officer, Kalkunte Grama Panchayath, Hoskote Taluk, Bangalore Rural District, with cumulative effect.

8. Action taken in the matter shall be intimated to this Authority.

Connected records are enclosed herewith.

09.12.20

(JUSTICE B.S.PATIL)
Upalokayukta,
State of Karnataka.

*BS**

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ-777/2017/ಎ.ಆರ್.ಇ-16

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001.
ದಿನಾಂಕ: 07.12.2020.

## ವಿಚಾರಣಾ ವರದಿ

**ಉಪಸ್ಥಿತರು:** **ಸೆಲ್ವಕುಮಾರ್.ಸಿ,** ಅಪರ ನಿಬಂಧಕರು ವಿಚಾರಣೆಗಳು-16, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌ-1 **ಶ್ರೀ ಪ್ರಸಾದ್,** ಕಾರ್ಯದರ್ಶಿ, ಕಲ್ಕುಂಟೆ ಗ್ರಾಮ ಪಂಚಾಯಿತಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಆ.ಸ.ನೌ-2 **ಶ್ರೀಮತಿ. ಶೃತಿ,** ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಲ್ಕುಂಟೆ ಗ್ರಾಮಪಂಚಾಯತಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಬಿಡಿ/3705/2014/ಸನಿಕಾಸ-2 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 03.05.2017.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 490 ಗ್ರಾಪಂಕಾ 2017 ಬೆಂಗಳೂರು, ದಿನಾಂಕ: 09.6.2017.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ/777/2017, ಬೆಂಗಳೂರು ದಿನಾಂಕ: 16.06.2017
4. Note No.Uplok-1 & 2/DE/Transfers/ 2018, dated 07.02.2019.

* * * *

ಈ ದೂರನ್ನು, ದೂರುದಾರರಾದ ಶ್ರೀ **ಶಂಕರ ಎಂ.ಬಿನ್ ಲೇಟ್ ಮುನಿಯಪ್ಪ,** ಅರೆಹಳ್ಳಿ ಗ್ರಾಮ ಕಲ್ಕುಂಟೆ ಅಂಚೆ, ಅನುಗೊಂಡನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ **ದೂರುದಾರರು** ಎಂದು ಕರೆಯಲ್ಪಡುತ್ತಾರೆ) ರವರು ಆ.ಸ.ನೌ-1 ಶ್ರೀ **ಪ್ರಸಾದ್,** ಕಾರ್ಯದರ್ಶಿ, ಕಲ್ಕುಂಟೆ ಗ್ರಾಮ ಪಂಚಾಯಿತಿ ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಆ.ಸ.ನೌ-2 **ಶ್ರೀಮತಿ. ಶೃತಿ,** ಪಂಚಾಯತಿ ಅಭಿವೃದ್ಧಿ ಅಧಿಕಾರಿ,

ಕಲ್ಕುಂಟೆ ಗ್ರಾಮಪಂಚಾಯತಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ **ಆಪಾದಿತ ಸರ್ಕಾರಿ ನೌಕರ-1 ಮತ್ತು 2** ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ದೂರು ಸಲ್ಲಿಸಿ, ಬೆಂಗಳೂರು ಗ್ರಾಮಾಂತರ ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ ಕಲ್ಕುಂಟೆ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ, ಅರೇಹಳ್ಳಿ ಗ್ರಾಮದಲ್ಲಿ ಸೇರಿದ ಸರ್ವೆ ನಂ: 100, 101/2 ಮತ್ತು 101/3 ರಲ್ಲಿ ಭೂ ಮಾಲೀಕರಾದ ರಾಜು ಬಿನ್ ಲೇಟ್ ಜಿ.ಎಂ ಬುಡ್ಡಪ್ಪ ಮತ್ತು ಪಿ. ಲಕ್ಷ್ಮಿನಾರಯಣ ಇವರುಗಳು ಅರೇಹಳ್ಳಿ ಗ್ರಾಮದಲ್ಲಿ ಕೃಷಿ ಭೂಮಿ ಹೊಂದಿದ್ದು, ಆ ಜಾಗದಲ್ಲಿ ನಿವೇಶನಗಳ ವಸತಿ ಬಡಾವಣೆ ನಿರ್ಮಿಸಿ, ಕೆಲ ನಿವೇಶನದಾರರಿಗೆ ಕಲ್ಕುಂಟೆ ಗ್ರಾಮ ಪಂಚಾಯತ್ ನಲ್ಲಿ ಅಕ್ರಮವಾಗಿ ನಮೂನೆ 9 ಮತ್ತು 11 ದಾಖಲಾತಿಗಳನ್ನು ಹೊಂದಿರುತ್ತಾರೆಂದು ನಂಬಲರ್ಹ ಮಾಹಿತಿ ತಿಳಿದು ಬಂದಿರುವುದಾಗಿ, ನಂತರ ಮಾಹಿತಿ ಹಕ್ಕು ಕಾಯ್ದೆಯಡಿ ಕಲ್ಕುಂಟೆ ಗ್ರಾಮ ಪಂಚಾಯತಿ ಕಾರ್ಯಾಲಯದಲ್ಲಿ ಮಾಹಿತಿ ಪಡೆದಾಗ, ಪಂಚಾಯತಿ ಅಧಿಕಾರಿ ನೀಡಿದ ದಾಖಲೆಗಳಲ್ಲಿ ಅವ್ಯವಹಾರ ಕಂಡು ಬಂದಿರುವುದಾಗಿ, ಕೃಷಿ ಭೂಮಿಯಲ್ಲಿ ವಸತಿ ಬಡಾವಣೆ ನಿರ್ಮಿಸಿ ಜಿಲ್ಲಾಧಿಕಾರಿಗಳ (DC Conversation & AC Conversation & BMRDA Approval & Layout Planning Sketch) ಈ ಮೇಲೆ ನೀಡಿರುವ ಯಾರ ಅನುಮತಿ ಹಾಗೂ ದಾಖಲಾತಿಗಳನ್ನೂ ನಿರ್ವಹಿಸದೆ ಹಾಗೂ ಈ ಬಡಾವಣೆಯಲ್ಲಿ ಸರ್ಕಾರಿ ಕಂದಾಯ ಇಲಾಖೆ ಕಾಯ್ದಿರಿಸಿದ (ಎ ಖರಾಬು) ಮತ್ತು (ಬಿ ಖರಾಬು) ನನ್ನು ಸೇರಿ ನಿವೇಶನದಾರರಿಗೆ ಗ್ರಾಮ ಪಂಚಾಯತಿಯಲ್ಲಿ ನಕಲಿ ಖಾತಾ ಮಾಡಿಕೊಟ್ಟಿರುತ್ತಾರೆಂದು, ಇನ್ನೂ ಆನೇಕ ಕೆಲ ನಿವೇಶನದಾರರಿಗೆ ಗ್ರಾಮ ಪಂಚಾಯತಿ ನೀಡಿದ ನಕಲಿ ಖಾತಾ ಸಂಖ್ಯೆ ಆದಾರದಮೇಲೆ ಹೊಸಕೋಟೆ ಸಬ್ ರಿಜಿಸ್ಟ್ರಾರ್ ನೊಂದಣಿ ಕಛೇರಿಯಲ್ಲಿ ಅಕ್ರಮವಾಗಿ ನೋಂದಾಯಿಸಿರುತ್ತಾರೆಂದು, ಹೀಗೆ ಕಾನೂನು ಅರಿವು ತಿಳಿಯದ ಗ್ರಾಮೀಣ ಜನರಿಗೆ ಮತ್ತು ಸಾರ್ವಜನಿಕರಿಗೆ ವಂಚಿಸಿರುತ್ತಾರೆಂದು ಹೇಳಿರುತ್ತಾರೆ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಎ.ಬಿ ಪ್ರಭಾಕರವರ ಅಡಳಿತ ಅವಧಿಯಲ್ಲಿ ನಡೆದ ಅಕ್ರಮಗಳಿಗೆ ಪಂಚಾಯತಿ ಅಡಳಿತ ಮತ್ತು ಸಿಬ್ಬಂದಿ ಹಾಗೂ ಗ್ರಾಮ ಪಂಚಾಯತಿ ಅಧಿಕಾರಿಗಳು ಸಹ ಶಾಮೀಲಾಗಿ, ಗ್ರಾಮೀಣಾಭಿವೃದ್ದಿ ಪಂಚಾಯತ್ ರಾಜ್ ಇಲಾಖೆಯ ಆದೇಶ ನೀತಿ ನಿಯಮ

ಉಲ್ಲಂಘಿಸಿ ಅಕ್ರಮವಾಗಿ ನಕಲಿ ಖಾತೆಗಳನ್ನು ಮಾಡಿಕೊಟ್ಟಿರುತ್ತಾರೆಂದು ಆಪಾದಿಸಿ ಸಲ್ಲಿಸಿರುವ ದೂರು ಅರ್ಜಿಯಾಗಿರುತ್ತದೆ.

2) ಸದರಿ ಆಪಾದನೆಗಳಿಗೆ ಸಂಬಂಧಿಸಿದಂತೆ, ಆಪಾದಿತ ಸರ್ಕಾರಿ ನೌಕರ-1 ಮತ್ತು 2 ರವರುಗಳ ಆಕ್ಷೇಪಣೆಯನ್ನು ಮತ್ತು ಸಂಬಂಧಪಟ್ಟ ದಾಖಲಾತಿಗಳನ್ನು ಸಲ್ಲಿಸಿದ್ದು, ಆಪಾದಿತ ಸರ್ಕಾರಿ ನೌಕರ-1 ಮತ್ತು 2 ರವರುಗಳು ಸಲ್ಲಿಸಿರುವ ಆಕ್ಷೇಪಣೆ, ದಾಖಲಾತಿಗಳನ್ನು ಪರಿಶೀಲಿಸಲಾಗಿ, ಆಪಾದಿತ ಸರ್ಕಾರಿ ನೌಕರರು ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಸದರಿ ದೂರಿಗೆ ಸಂಬಂಧಿಸಿದಂತೆ ಆ.ಸ.ನೌ-1 ಮತ್ತು 2 ರವರು ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಮಾಡಿಲ್ಲದಿರುವುದು ಕಂಡು ಬಂದಿದ್ದರಿಂದ ಕರ್ನಾಟಕ ಸಿವಿಲ್ ಸೇವಾ (ನಡತೆ) 1966 ರಡಿ ನಿಯಮ 3(1) ರಡಿಯಲ್ಲಿ ದುರ್ನಡತೆ ತೋರಿದ್ದಾರೆಂದು ಕಂಡು ಬಂದಿದ್ದರಿಂದ ಎದುರುದಾರರ/ಆ.ಸ.ನೌ-1 ಮತ್ತು 2 ರವರುಗಳ ವಿರುದ್ಧ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದಾಗಿ, ಸದರಿ ವರದಿಯನ್ವಯ ಸಕ್ಷಮ ಪ್ರಾಧಿಕಾರವು ಉಲ್ಲೇಖ(2)ರಂತೆ ಸರ್ಕಾರಿ ಆದೇಶ ದಿನಾಂಕ: 09/06/2017 ರಂದು, ಮಾನ್ಯ ಉಪಲೋಕಾಯುಕ್ತ-2 ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ, ನಾಮ ನಿರ್ದೇಶನವನ್ನು ನೀಡಿರುವ ಮೇರೆಗೆ, ಮಾನ್ಯ ಉಪಲೋಕಾಯುಕ್ತ-2 ರವರು ಉಲ್ಲೇಖ(3)ರಂತೆ ದಿನಾಂಕ: 16/06/2017 ರಂದು ಅಪರ ನಿಬಂಧಕರು, ವಿಚಾರಣೆಗಳು-11 ರವರಿಗೆ ವಿಚಾರಣೆ ಮಾಡಿ, ವರದಿಯನ್ನು ಸಲ್ಲಿಸಲು ಶಿಫಾರಸ್ಸು ಮಾಡಿದ್ದು, ಉಲ್ಲೇಖ (4)ರಂತೆ ಅಪರ ನಿಬಂಧಕರು, ವಿಚಾರಣೆಗಳು-11 ರವರಿಂದ ಈ ವಿಚಾರಣಾ ಪ್ರಾಧಿಕಾರವಾದ ಅಪರ ನಿಬಂಧಕರು, ವಿಚಾರಣೆಗಳು-16 ರವರಿಗೆ ವರ್ಗಾವಣೆಗೊಂಡಿರುತ್ತದೆ.

3) ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ.-1 ಮತ್ತು 2 ರವರುಗಳ ವಿರುದ್ಧ ದೋಷಾರೋಪಣೆ (Articles of Charge) ಅನ್ನು ಅಪರ ನಿಬಂಧಕರು, ವಿಚಾರಣೆಗಳು-11 ರವರು ರಚಿಸಿದ್ದು,

ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌ.-1 ಮತ್ತು 2 ರವರಿಗೆ ದಿನಾಂಕ: 16/12/2017 ರಂದು ಕಳುಹಿಸಲಾಗಿರುತ್ತದೆ. ಸದರಿ ದೋಷಾರೋಪಣಾ ಪಟ್ಟಿಯು ಈ ಕೆಳಕಂಡಂತೆ ಇರುತ್ತದೆ.

## ಅನುಬಂಧ-1
## ದೋಷಾರೋಪಣೆ

ಒಂದನೆಯ ಆಪಾದಿತ ಸರ್ಕಾರಿ ನೌಕರರಾದ ಶ್ರೀ. **ಪ್ರಸಾದ್** ಆದ ನೀವು, ಹೊಸಕೋಟೆ ತಾಲ್ಲೂಕಿನ ಕಲ್ಕುಂಟೆ ಗ್ರಾಮ ಪಂಚಾಯತಿಯಲ್ಲಿ ಕಾರ್ಯದರ್ಶಿಯಾಗಿ ಮತ್ತು ಎರಡನೇಯ ಆಪಾದಿತ ಸರ್ಕಾರಿ ನೌಕರರಾದ ಶ್ರೀಮತಿ. **ಶೃತಿ,** ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹೊಸಕೋಟೆ ತಾಲ್ಲೂಕಿನ ಕಲ್ಕುಂಟೆ ಗ್ರಾಮ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸಿಕೊಂಡಿದ್ದ ಅವಧಿಯಲ್ಲಿ, ಹೊಸಕೋಟೆ ತಾಲ್ಲೂಕಿನ ಅರೆಹಳ್ಳಿ ಗ್ರಾಮದ ಸರ್ವೆ ನಂಬರ್ 100, 101/2 ಮತ್ತು 101/3 ಇವುಗಳಲ್ಲಿ, ಸದರಿ ಕೃಷಿ ಜಮೀನಿನ ಮಾಲೀಕರುಗಳು ಬಡಾವಣೆ ನಿರ್ಮಾಣ ಸಂಬಂಧ ಜಿಲ್ಲಾಧಿಕಾರಿಗಳ ಭೂಪರಿವರ್ತನಾ ಆದೇಶ ಅಥವಾ ಮಂಜೂರಾತಿ, ಬಿ.ಎಂ.ಆರ್.ಡಿ.ಎ ನಿಂದ ಮಂಜೂರಾತಿ ಹಾಗೂ ಸಂಬಂಧಪಟ್ಟವರಿಗೆ ಬಡಾವಣೆಯ ನಕ್ಷೆ ಇವುಗಳನ್ನು ಪಡೆದುಕೊಳ್ಳದೆ ಅಕ್ರಮವಾಗಿ ನಿರ್ಮಿಸಿರುವ ಬಡಾವಣೆಯನ್ನು ನಮೂನೆ 9 ಮತ್ತು 11 ರಂತೆ ಗ್ರಾಮ ಪಂಚಾಯತಿ ಕಛೇರಿಯಲ್ಲಿ ಮಾಹಿತಿಗಳನ್ನು ದಾಖಲಿಸುವುದರ ಮೂಲಕ ಸರ್ಕಾರಿ ನೌಕರರಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (i) ರಿಂದ (iii) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.

## ಅನುಬಂಧ-2

## ದೋಷರೋಪಣೆಯ ವಿವರ

ದೂರುದಾರರಾದ ಶ್ರೀ. ಶಂಕರ್ ಎಂ. ಅರೆಹಳ್ಳಿ ಗ್ರಾಮ, ಆನುಗೊಂಡನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು ತಮ್ಮ ದೂರಿನಲ್ಲಿ ಅರೆಹಳ್ಳಿ ಗ್ರಾಮದ ಸರ್ವೆ ನಂ. 100, 101/2 ಮತ್ತು 101/3 ಇವುಗಳು ಕೃಷಿ ಜಮೀನಾಗಿದ್ದು, ಸದರಿ ಜಮೀನಿನ ಮಾಲೀಕರುಗಳು ಜಿಲ್ಲಾಧಿಕಾರಿಗಳ, ಉಪವಿಭಾಧಿಕಾರಿಗಳ ಮತ್ತು ಬಿ.ಎಂ.ಆರ್.ಡಿ.ಎ. ಇವರುಗಳ ಕಛೇರಿಯಿಂದ ಯಾವುದೇ ಭೂ ಪರಿವರ್ತನಾ ಆದೇಶ ಅಥವಾ ಮಂಜೂರಾತಿ ಆದೇಶ ಮತ್ತು ಬಡಾವಣೆಯ ಯೋಜನಾ ನಕ್ಷೆ ಇಲ್ಲದೆ ಬಡಾವಣೆಯನ್ನು ನಿರ್ಮಿಸಿದ್ದು, ಸದರಿ ಬಡಾವಣೆಯ ನಿವೇಶನಗಳಿಗೆ ನಕಲಿ ಖಾತಾ ಸಂಖ್ಯೆಯ ಆಧಾರದ ಮೇಲೆ ಹೊಸಕೋಟೆ ಉಪನೊಂದಣಾಧಿಕಾರಿಯವರ ಕಛೇರಿಯಲ್ಲಿ ನೊಂದಣಿ ಆಧಾರದ ಮೇಲೆ ಗ್ರಾಮ ಪಂಚಾಯತಿ ಕಛೇರಿಯಲ್ಲಿ ನಮೂನೆ 9 ಮತ್ತು 11 ಅನ್ನು ದಾಖಲಿಸಿರುತ್ತಾರೆಂದು ಆಪಾದಿಸಿರುತ್ತಾರೆ.

ಸದರಿ ಆಪಾದನೆಗೆ ಸಂಬಂಧಿಸಿದಂತೆ, ದೂರುದಾರರು ಸಲ್ಲಿಸಿರುವ ದೂರಿನಲ್ಲಿ ಈ ಅಂಶಗಳ ಕುರಿತು ಆಪಾದಿತ ಸರ್ಕಾರಿ ನೌಕರರು ಆಕ್ಷೇಪಣೆ ಮತ್ತು ಸೂಕ್ತ ಸಾಕ್ಷ್ಯಧಾರಗಳನ್ನು ಸಲ್ಲಿಸಿದ್ದು, ಈ ಕಳಕಂಡ ಅಂಶಗಳು ಕಂಡು ಬರುತ್ತದೆ.

1) ಅರೆಹಳ್ಳಿ ಗ್ರಾಮದ ಸರ್ವೆ ನಂಬರ್ 100, 101/2 ಮತ್ತು 101/3 ಈ ಜಮೀನುಗಳು ಕೃಷಿ ಜಮೀನುಗಳಾಗಿರುತ್ತವೆ.

2) ಸದರಿ ಕೃಷಿ ಜಮೀನಿನಲ್ಲಿ ಅಕ್ರಮವಾಗಿ ಭೂ ಪರಿವರ್ತನಾ ಆದೇಶ, ಮಂಜೂರಾತಿ ಮತ್ತು ಬಡಾವಣೆಯ ಮಂಜೂರಾತಿ ನಕ್ಷೆ ಇಲ್ಲದೆ ಬಡಾವಣೆ ನಿರ್ಮಾಣ ಮಾಡಿರುತ್ತಾರೆ.

3) ಅಕ್ರಮವಾಗಿ ನಿರ್ಮಾಣ ಮಾಡಿರುವ ಬಡಾವಣೆಯಲ್ಲಿನ ನಿವೇಶನಗಳಿಗೆ ನಕಲಿ ಖಾತಾ ಸಂಖ್ಯೆ ನೀಡಿರುವುದು.

4) ಸದರಿ ನಕಲಿ ಖಾತಾ ಸಂಖ್ಯೆಗಳ ಆಧಾರದ ಮೇಲೆ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿಯಾಗಿರುತ್ತದೆ.

5) ನಕಲಿ ಖಾತಾ ಸಂಖ್ಯೆಗಳ ಮೇಲೆ ಉಪನೊಂದಣಾಧಿಕಾರಿಯವರ ಕಛೇರಿಯಲ್ಲಿ ನೊಂದಣಿಯಾಗಿರುವ ನಿವೇಶನಗಳನ್ನು ನಮೂನೆ-9 ಮತ್ತು 11 ರಲ್ಲಿ ದಾಖಲಿಸಿರುವುದು.

ದೂರಿನಲ್ಲಿನ ಅಂಶಗಳನ್ನು ಗಮನಿಸಿದಾಗ ಆಪಾದಿತ ಸರ್ಕಾರಿ ನೌಕರರಾದ ನೀವು ದೂರುದಾರರು ದೂರಿನಲ್ಲಿ ಮಾಡಿರುವ ಆಪಾದನೆಗಳಿಗೆ ಸಂಬಂಧಿಸಿದಂತೆ, ನೀವುಗಳು ಕೃಷಿ ಜಮೀನಿನಲ್ಲಿ ಅನಧಿಕೃತವಾಗಿ ಮತ್ತು ಅಕ್ರಮವಾಗಿ ನಿಯಮಗಳನ್ನು ಉಲ್ಲಂಘನೆ ಮಾಡಿ ಬಡಾವಣೆ ನಿರ್ಮಿಸಲು ಪರೋಕ್ಷವಾಗಿ ಸಹಕರಿಸಿ, ತದನಂತರ ಸದರಿ ನಿವೇಶನಗಳನ್ನು ಗ್ರಾಮ ಪಂಚಾಯತಿ ಕಛೇರಿಯಲ್ಲಿ ದಾಖಲಿಸಿರುವ, ಈ ಕೃತ್ಯ ದುರ್ನಡತೆ ಎಂಬ ಪರಿಭಾಷೆಯಲ್ಲಿ ಬರುವುದರಿಂದ ಕರ್ನಾಟಕ ಸಿವಿಲ್ ಸೇವಾ (ನಡತೆ) 1966ರಡಿ ನಿಯಮ 3(1)ರಡಿಯಲ್ಲಿ ದುರ್ವರ್ತನೆ ಮಾಡಿದ್ದಾರೆಂದು ಕಂಡುಬಂದಿದ್ದರಿಂದ, ಎದುರುದಾರರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ಸಕ್ಷಮ ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರಡಿಯಲ್ಲಿ ವರದಿಯನ್ನು ಸಲ್ಲಿಸಿದ್ದು, ಶಿಸ್ತು ಕ್ರಮವನ್ನು ಜರುಗಿಸಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡುವಂತೆ ಕೋರಿರುವುದನ್ನು ಪರಿಗಣಿಸಿ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಯಿಂದ ಮಾಡಿರುವ ಶಿಫಾರಸ್ಸನ್ನು ಒಪ್ಪಿ ನಿಮ್ಮ ವಿರುದ್ಧ ಶಿಸ್ತು ಕ್ರಮಕೈಗೊಂಡು ವರದಿಯನ್ನು ಸಲ್ಲಿಸುವಂತೆ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಲಾಗಿರುತ್ತದೆ. **ಆದ್ದರಿಂದ ನಿಮ್ಮ ಮೇಲೆ ಈ ದೋಷಾರೋಪಣೆ.**

4) ಈ ಮೇಲ್ಕಂಡ ದೋಷಾರೋಪಣೆ (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌ.ರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ.-1 ರವರು ದಿನಾಂಕ 03/10/2017 ರಂದು ಮತ್ತು ಆಪಾದಿತ ಸರ್ಕಾರಿ ನೌಕರ-2 ರವರು ದಿನಾಂಕ 16.12.2017 ರಂದು ವಿಚಾರಣಾಧಿಕಾರಿಯವರ ಮುಂದೆ ಹಾಜರಾಗಿದ್ದು, ಸದರಿಯವರ ಪ್ರಥಮ ಮೌಖಿಕ ಹೇಳಿಕೆ, ನಿಯಮ-11 ಕೆ.ಸಿ.ಎಸ್. (ಸಿಸಿಎ) ರೂಲ್ಸ್

ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌ.-1 ಮತ್ತು 2 ರವರುಗಳು ತಪ್ಪೊಪ್ಪಿಕೊಳ್ಳದೆ ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

5) ಆ.ಸ.ನೌ. ರವರಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

6) ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ.-1 ರವರು ತಮ್ಮ ಪರವಾಗಿ ದಿನಾಂಕ 16/12/2017 ರಂದು ರಕ್ಷಣಾ ಹೇಳಿಕೆಯನ್ನು ಸಲ್ಲಿಸಿದ್ದು, ತಮ್ಮ ರಕ್ಷಣಾ ಹೇಳಿಕೆಯಲ್ಲಿ ತನ್ನ ವಿರುದ್ಧ ಆರೋಪಿಸಲಾದ ಆಪಾದನೆಗಳನ್ನು ನಿರಾಕರಿಸಿರುತ್ತಾರೆ. ಅಲ್ಲದೆ, ಈ ಕೃಷಿ ಜಮೀನುಗಳಾದ ಸರ್ವೆ ನಂ. 100, 101/2 ಮತ್ತು 101/3 ಸ್ವತ್ತುಗಳಲ್ಲಿ ವಾಸದ ಉಪಯೋಗಕ್ಕೆ ಭೂಮಾಲೀಕರು ಬಳಕೆ ಮಾಡಿಕೊಂಡಿದ್ದರೂ ಸಹ, ಯಾವುದೇ ಆಕ್ಷೇಪಣೆ ಸಲ್ಲಿಸಿರುವುದಿಲ್ಲವೆಂದು ಹೇಳಿರುತ್ತಾರೆ. ಅಲ್ಲದೆ, ಈ ಸಂಸ್ಥೆಗೆ ಸಲ್ಲಿಸಿದ ದಾಖಲೆಗಳಲ್ಲಿ ಶ್ರೀಮತಿ ಹೆಚ್.ಸಿ. ಶೃತಿ (ಆ.ಸ.ನೌ-2) ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ನಮೂದಿಸಿರುವ ಖಾತಾ ಪುಸ್ತಕದ ನಕಲು ಪ್ರತಿಯನ್ನು ಸಲ್ಲಿಸಿರುವುದಾಗಿ ಹಾಗೂ ಈ ಪ್ರಕರಣದಲ್ಲಿ ತಾನು ಭಾಗಿಯಾಗಿರುವುದಿಲ್ಲವೆಂದು ಹೇಳಿರುತ್ತಾರೆ. ಅಲ್ಲದೆ, ತಾನು ಕಲ್ಕುಂಟೆ ಗ್ರಾಮಪಂಚಾಯತಿಯಲ್ಲಿ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿರುವುದನ್ನು ಒಪ್ಪಿಕೊಂಡಿರುತ್ತಾರೆ. ಆದರೆ, ತನ್ನ ಅವಧಿಯಲ್ಲಿ ನಮೂನೆ 9 ಮತ್ತು 11 ದಾಖಲೆಗಳಲ್ಲಿ ಸಹಿ ಮಾಡಿರುವುದಿಲ್ಲವೆಂದು ಹೇಳಿರುತ್ತಾರೆ. ಅಲ್ಲದೆ, ತಾನು ಉಪ ನೋಂದಣಾಧಿಕಾರಿಗಳಿಗೆ ವಿವಾದಿತ ಸ್ವತ್ತುಗಳಲ್ಲಿ ನೋಂದಣಿಗೆ ಅನುಕೂಲವಾಗುವಂತೆ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲವೆಂದು ಹಾಗೂ ತನಗೆ ಖಾತಾ ತೆರೆಯುವ ಅಧಿಕಾರ ಇರುವುದಿಲ್ಲವೆಂದು ಹೇಳಿರುತ್ತಾರೆ. ಅಲ್ಲದೆ, ಈ ವಿವಾದಿತ ಸ್ವತ್ತುಗಳಿಗೆ ಸಂಬಂಧಿಸಿದಂತೆ, ಸದರಿ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪಂಚಾಯಿತಿ ಅಭಿವೃದ್ಧಿ

ಅಧಿಕಾರಿಗಳು ಖಾತೆ ತೆರೆದು ತೆರಿಗೆ ಪರಿಷ್ಕರಿಸಿರುವ ದಾಖಲೆಗಳನ್ನು ಈ ಕಛೇರಿಗೆ ಸಲ್ಲಿಸಿರುವುದಾಗಿ ಹೇಳಿರುತ್ತಾರೆ. ಕಾರಣ, ತನ್ನನ್ನು ಈ ಆರೋಪದಿಂದ ದೋಷಮುಕ್ತಗೊಳಿಸುವಂತೆ ವಿನಂತಿಸಿರುತ್ತಾರೆ.

7) ಆ.ಸ.ನೌ–2 ರವರು ತಮ್ಮ ಪರವಾಗಿ ದಿನಾಂಕ 31/03/2018 ರಂದು ರಕ್ಷಣಾ ಹೇಳಿಕೆಯನ್ನು ಸಲ್ಲಿಸಿದ್ದು, ತಮ್ಮ ರಕ್ಷಣಾ ಹೇಳಿಕೆಯಲ್ಲಿ ತಾನು ಸದರಿ ಕಲ್ಕುಂಟೆ ಗ್ರಾಮಪಂಚಾಯತಿಯಲ್ಲಿ ಪಿಡಿಓ ಆಗಿ ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ, ಹೊಸಕೋಟೆ ತಾಲ್ಲೂಕಿನ ಹರೇಹಳ್ಳಿ ಗ್ರಾಮದ ಸರ್ವೆ ನಂ. 100, 101/2 ಮತ್ತು 101/3 ಕೃಷಿ ಜಮೀನಿನ ಮಾಲೀಕರುಗಳು ಅಕ್ರಮವಾಗಿ ಬಡಾವಣೆ ಮಾಡಿದ್ದಕ್ಕೆ ಸಂಬಂಧಪಟ್ಟಂತೆ, ತಾನು ಯಾವುದೇ ಖಾತಾ ಸಂಖ್ಯೆಯನ್ನು ನೀಡಿರುವುದಿಲ್ಲವೆಂದು ಮತ್ತು ಖಾತಾವನ್ನು ಮಾಡಿಕೊಟ್ಟಿರುವುದಿಲ್ಲವೆಂದು ಹೇಳಿರುತ್ತಾರೆ. ಮುಂದುವರೆದು, ಈ ಸರ್ವೆ ನಂಬರಿನ ಜಮೀನುಗಳಲ್ಲಿ ನಿವೇಶನ ಮಾಡುವ ಬಗ್ಗೆ ದಿನಾಂಕ 08.08.2011 ರಂದು ಗ್ರಾಮಪಂಚಾಯತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಾಮಾನ್ಯ ಸಭೆ ಸಂಖ್ಯೆ 8 ರಲ್ಲಿ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕಾರ ಮಾಡಿಕೊಂಡಿದ್ದು, ಆದರೆ ತಾನು ಸದರಿ ನಿರ್ಣಯವು ಕಾನೂನುಬಾಹಿರವೆಂದು ಸದರಿ ಸಭೆಗೆ ವಿವರವಾಗಿ ತಿಳಿಸಿ ಹೇಳಿದ್ದಾಗಿ, ಆದರೂ ಈ ಬಗ್ಗೆ ಸಭೆಯು ನಿರ್ಣಯಿಸಿ ಅಂಗೀಕಾರ ಮಾಡಿದ್ದಾಗಿ ಹಾಗೂ ಸದರಿ ಗ್ರಾಮಪಂಚಾಯತಿಯ ಮಿಟಂಗ್ ಪ್ರೋಸಿಂಡಿಗ್ಸ್ ಬುಕ್‌ನಲ್ಲಿ " ಹಾಜರಿದ್ದ ಸಭೆಗೆ ಸದರಿ ವಿಷಯವು ಕಾನೂನುಬಾಹಿರವೆಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ತಿಳಿಸಿದರು " ಎಂದು ತಾನು ಬರೆದಿರುವುದಾಗಿ ಹಾಗೂ ಸದರಿ ಮೀಟಿಂಗ್ ಪ್ರೋಸಿಡಿಂಗ್ಸ್‌ನ್ನು ಶ್ರೀ ಕುಮಾರ್ .ಪಿ, ನಿರ್ದೇಶಕರು (ಪಂಚಾಯತ್‌ರಾಜ್) ಆರ್.ಡಿ.ಪಿ.ಆರ್. ನೋಡಿದೆ ಎಂದು ಸಹಿ ಮಾಡಿರುವುದಾಗಿ ಹೇಳಿರುತ್ತಾರೆ. ಕಾರಣ, ತಾನು ಈ ವಿವಾದಿತ ಜಮೀನುಗಳಲ್ಲಿ ಖಾತಾವನ್ನು

ದಾಖಲಿಸಿರುವುದಿಲ್ಲವೆಂದು ಹೇಳಿರುತ್ತಾರೆ. ಅಲ್ಲದೆ, ದಿನಾಂಕ 08.08.2011 ರಂದು ಕಲ್ಕುಂಟೆ ಗ್ರಾಮಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯವು ಕಾನೂನುಬಾಹಿರವೆಂದು ತಾನು ತಿಳಿಸಿರುವುದಾಗಿ ಹೇಳಿರುತ್ತಾರೆ. ಅಲ್ಲದೆ, ತಾನು ಸದರಿ ಜಮೀನಿನಲ್ಲಿ ವಿಂಗಡಿಸಿದ ನಿವೇಶನಗಳಿಗೆ ಖಾತಾ ಮಾಡಿಕೊಡಲು ತನ್ನ ಮೇಲೆ ಒತ್ತಡ ಹೇರಿದ್ದಾಗಿಯೂ, ತಾನು ಒಪ್ಪದೆ ಇದ್ದಾಗ ದಿನಾಂಕ 09.03.2012 ರಂದು ಕಲ್ಕುಂಟೆ ಗ್ರಾಮಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ನಿವೇಶನಗಳ ಖಾತಾವನ್ನು ಮಾಡಿಕೊಡುವ ಜವಾಬ್ದಾರಿಯನ್ನು ಗ್ರಾಮಪಂಚಾಯಿತಿಯ ಕಾರ್ಯದರ್ಶಿಗೆ ವಹಿಸಿ ನಿರ್ಣಯವನ್ನು ಅಂಗೀಕರಿಸಿರುವುದಾಗಿ ಹೇಳಿರುತ್ತಾರೆ. ತಾನು ಯಾವುದೇ ರೀತಿಯಿಂದಲೂ ದುರ್ನಡತೆ ಎಸಗಿರುವುದಿಲ್ಲವೆಂದು ಮತ್ತು ಕರ್ತವ್ಯಲೋಪ ಮಾಡಿರುವುದಿಲ್ಲವೆಂದು ಕಾರಣ, ತನ್ನನ್ನು ದೋಷಮುಕ್ತಗೊಳಿಸುವಂತೆ ವಿನಂತಿಸಿರುತ್ತಾರೆ.

8) ಈ ವಿಚಾರಣೆಯಲ್ಲಿ, ಆ.ಸ.ನೌ.-1 ಮತ್ತು 2 ರವರುಗಳ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರಾದಶ್ರೀ. **ಶಂಕರ್ ಬಿನ್ ಲೇಟ್ ಮುನಿಯಪ್ಪ, ಅರೇಹಳ್ಳಿ, ಹೊಸಕೋಟೆ ತಾಲ್ಲೂಕು** ರವರನ್ನು ಪಿ.ಡಬ್ಲ್ಯು.1 ಎಂದು ಸಾಕ್ಷ್ಯ ನುಡಿಸಿಕೊಂಡು, **ನಿ.ಪಿ.1 ರಿಂದ 10** ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ.

9) ಆ.ಸ.ನೌ–1 ರವರು ತಮ್ಮ ಪರವಾಗಿ ತಾವೇ ಡಿ.ಡಬ್ಲ್ಯೂ–1 ಎಂದು ಸಾಕ್ಷ್ಯ ನುಡಿದಿದ್ದು, ನಿ.ಡಿ.–1 ರಿಂದ 13 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ ಮತ್ತು ಆ.ಸ.ನೌ–2

ರವರು ತಮ್ಮ ಪರವಾಗಿ ತಾವೇ ಡಿ.ಡಬ್ಲ್ಯೂ–2 ಎಂದು ಸಾಕ್ಷ್ಯ ನುಡಿದಿದ್ದು, ನಿ.ಡಿ. 14 ರಿಂದ 20 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

10) ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಮತ್ತು ಆ.ಸ.ನೌ. ರವರ ಪರ ಸಲ್ಲಿಸಿರುವ ಲಿಖಿತ ವಾದವನ್ನು ಪರಿಶೀಲಿಸಲಾಯಿತು.

11) ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ–1 ಮತ್ತು 2 ರವರುಗಳ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2**: ಆದೇಶವೇನು?

12) ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

13) ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ.

**ಅಂಶ 1: ಸಕಾರಾತ್ಮಕವಾಗಿದೆ.**

**ಅಂಶ 2: ಅಂತಿಮ ಆದೇಶದಂತೆ**

## ಕಾರಣಗಳು:

14) ಈ ಪ್ರಕರಣದಲ್ಲಿ ಆ.ಸ.ನೌ–1 ಮತ್ತು 2 ರವರುಗಳ ವಿರುದ್ಧ ಆರೋಪಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ತಮ್ಮ ಪರವಾಗಿ ದೂರುದಾರರಾದ ಶ್ರೀ. **ಶಂಕರ್ ಬಿನ್ ಲೇಟ್ ಮುನಿಯಪ್ಪ, ಅರೇಹಳ್ಳಿ, ಹೊಸಕೋಟೆ ತಾಲ್ಲೂಕು** ರವರನ್ನು ಪಿ.ಡಬ್ಲ್ಯೂ–1 ಎಂದು ಸಾಕ್ಷ್ಯ ನುಡಿಸಿಕೊಂಡು, **ನಿ.ಪಿ.1** ರಿಂದ **10** ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ.

15) ಪಿಡಬ್ಲ್ಯೂ–1 ದೂರುದಾರ ಶ್ರೀ. ಶಂಕರ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಅರೇಹಳ್ಳಿ ಗ್ರಾಮದ ಸರ್ವೆ ನಂ: 100, 101/2 ಮತ್ತು 101/3 ರಲ್ಲಿ ವ್ಯವಸಾಯದ ಭೂಮಿಯನ್ನು ರಾಜು ಮತ್ತು ಲಕ್ಷ್ಮೀನಾರಾಯಣ ಎಂಬುವವರು ಖರೀದಿಸಿ ಸ್ವಾಧೀನ ಹೊಂದಿದ್ದರೆಂದು, ಕಲ್ಕುಂಟೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಈ ಜಮೀನುಗಳು ಬರುತ್ತವೆಂದು ನುಡಿದಿರುತ್ತಾರೆ. ಸದರಿ ಜಮೀನಿನಲ್ಲಿ ಮೊದಲು ರಾಗಿ ಮತ್ತು ಭತ್ತ ಬೆಳೆಯುತಿದ್ದರೆಂದು, ತದ ನಂತರ ಆ ಜಮೀನನ್ನು ಲೇಔಟ್ ಆಗಿ ಪರಿವರ್ತಿಸಿ ಸೈಟ್‌ಗಳನ್ನಾಗಿ ಮಾಡಿರುತ್ತಾರೆಂದು ಹೇಳಿರುತ್ತಾರೆ. ಮುಂದುವರೆದು, ಈ ಕೆಳಕಂಡಂತೆ ನುಡಿದಿರುತ್ತಾರೆ:

**" ಸದರಿ ಸೈಟ್ ಗಳನ್ನು ಮಾಡಲು ಕೃಷಿ ಜಮೀನಿನಲ್ಲಿ ಅವಶ್ಯಕವಿರುವ ಭೂಪರಿವರ್ತನಾ ಆದೇಶ (ಎನ್.ಎ)ವನ್ನು ಪಡೆದಿರುವುದಿಲ್ಲ ಹಾಗೂ ನಕಾಶೆಯನ್ನು ಅನುಮೋದಿಸಿರುವುದಿಲ್ಲ, ನಕಲಿ ಖಾತಾಗಳನ್ನು ಮಾಡಿ ಸೈಟ್‌ಗಳನ್ನು ಹಂಚಿರುತ್ತಾರೆಂದು, ಸದರಿ ಸೈಟ್‌ಗಳನ್ನು ಪಂಚಾಯತಿಯಲ್ಲಿ**

**ಖಾತಾಮಾಡಿ ಬೇರೆ ಬೇರೆ ವ್ಯಕ್ತಿಗಳಿಗೆ ರಾಜು ಮತ್ತು ಲಕ್ಷ್ಮೀನಾರಯಣರವರು ಮಾರಾಟ ಮಾಡಿರುತ್ತಾರೆ** " ಎಂದು ನುಡಿದಿರುತ್ತಾರೆ.

16) ಪಿಡಬ್ಲ್ಯೂ–1 ರವರು ಮುಂದುವರೆದು, ತಾನು ಮಾಹಿತಿ ಹಕ್ಕಿನಡಿಯಲ್ಲಿ ಅರೇಹಳ್ಳಿ ಗ್ರಾಮ, ಕಲ್ಕುಂಟೆ ಗ್ರಾಮ ಪಂಚಾಯತಿಯಲ್ಲಿ ಅರ್ಜಿ ಸಲ್ಲಿಸಿ, ಸದರಿ ಲೇಔಟ್‌ನ ಬಗ್ಗೆ ಜಿಲ್ಲಾಧಿಕಾರಿಗಳ ಭೂಪರಿವರ್ತನಾ ಆದೇಶ ಮತ್ತು ನಕ್ಷೆಯನ್ನು ಕೇಳಿದ್ದು, ಆ ಬಗ್ಗೆ ಯಾವುದೇ ಆದೇಶ ಇರುವುದಿಲ್ಲವೆಂದು ತನಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಆ.ಸ.ನೌ–2 ಶ್ರೀ. ಶೃತಿ ರವರು ಹಿಂಬರಹ ನೀಡಿರುವುದಾಗಿ ನುಡಿದಿರುತ್ತಾರೆ.

17) ಪಿಡಬ್ಲ್ಯೂ–1 ರವರು ಮುಂದುವರೆದು, ತಾನು ಈ ಬಗ್ಗೆ ಹೊಸಕೋಟೆ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತ್ ಬೆಂಗಳೂರು ಗ್ರಾಮಾಂತರ ರವರಿಗೆ ಕ್ರಮ ಜರುಗಿಸಲು ದೂರು ಸಲ್ಲಿಸಿರುವುದಾಗಿಯೂ, ಆದರೆ ಈ ಬಗ್ಗೆ ಅವರುಗಳು ಯಾವುದೇ ಕ್ರಮವನ್ನು ಜರುಗಿಸಿರುವುದಿಲ್ಲವೆಂದು, ಕಾರಣ ತಾನು ಲೋಕಾಯುಕ್ತ ಸಂಸ್ಥೆಗೆ ದಿ: 31/10/2014 ರಂದು ದೂರು ನೀಡಿರುವುದಾಗಿ ನುಡಿದಿರುತ್ತಾರೆ. ತಾನು ದಿ: 31/10/2014 ರಂದು ಲೋಕಾಯುಕ್ತಕ್ಕೆ ಸಲ್ಲಿಸಿದ ದೂರು ಅರ್ಜಿ **ನಿಶಾನೆ ಪಿ–1, ಪ್ರಪತ್ರ 1 ಮತ್ತು 2** ರ ದಿನಾಂಕ: 31/10/2014 ಕ್ರಮವಾಗಿ **ನಿಶಾನೆ ಪಿ–2 ಮತ್ತು 3 ಎಂದು ಗುರುತಿಸಿರುತ್ತಾರೆ**. ತಾನು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್, ಮುಖ್ಯ ಕಾರ್ಯನಿರ್ವಾಹಕ ಅದಿಕಾರಿಗಳಿಗೆ ಸಲ್ಲಿಸಿದ ದೂರಿನ ಅರ್ಜಿಯ ಜೆರಾಕ್ಸ ಪ್ರತಿಯನ್ನು **ನಿಶಾನೆ ಪಿ–4** ಎಂದು ಗುರುತಿಸಿರುತ್ತಾರೆ. ಅಲ್ಲದೆ, ಆ.ಸ.ನೌ–2 ರವರು ದಿ: 09/07/2014 ರಂದು ತನಗೆ ನೀಡಿದ ಹಿಂಬರಹದ ಜೆರಾಕ್ಸ ಪ್ರತಿಯನ್ನು **ನಿಶಾನೆ ಪಿ–5** ಎಂದು ಗುರುತಿಸಿರುತ್ತಾರೆ. ಅಲ್ಲದೆ, ಬೇರೆ

ಬೇರೆ ಖಾಸಗಿ ವ್ಯಕ್ತಿಗಳ ಹೆಸರಿಗೆ ಸೈಟ್‌ಗಳನ್ನು ಪಂಚಾಯತಿ ತೆರಿಗೆ ರಿಜಿಸ್ಟರ್‌ನಲ್ಲಿ ನಮೂದಿಸಿರುವ ಬಗ್ಗೆ ತಾನು ನೀಡಿದ ಮಾಹಿತಿ ಹಕ್ಕಿನಡಿ ನೀಡಿದ 20 ಜೆರಾಕ್ಸ ಹಾಳೆಗಳನ್ನು **ನಿಶಾನೆ ಪಿ–6 (20 ಹಾಳೆಗಳು)** ಎಂದು ಗುರಿತಿಸಲಾಗಿರುತ್ತದೆ. ದೂರುದಾರರು ವಿವಾದಿತ ಸರ್ವೆ ನಂ: 101/2 ಮತ್ತು 101/3ರ 2 ಪಹಣಿ ಪತ್ರಿಕೆಗಳನ್ನು ಗುರುತಿಸಿದ್ದು, ಅವುಗಳನ್ನು **ನಿಶಾನೆ ಪಿ–7 ಮತ್ತು 8** ಎಂದು ಗುರುತಿಸಿಕೊಂಡಿರುತ್ತಾರೆ. ದೂರುದಾರರು ಈ ಕೇಸಿನ ದೂರಿನ ವಿಚಾರಣೆಯ ಕಾಲಕ್ಕೆ ಸಲ್ಲಿಸಿದ ಪ್ರತ್ಯುತ್ತರ ಪ್ರತಿಯನ್ನು **ನಿಶಾನೆ ಪಿ–9 ಎಂದು ಗುರುತಿಸಿರುತ್ತಾರೆ.** ಈ ಬಗ್ಗೆ ದಿನಾಂಕ: 04/01/2013 ರಂದು ಹೊರಡಿಸಿದ ಸರ್ಕಾರದ ಸುತ್ತೋಲೆ ನಿಶಾನೆ ಪಿ–10 ( 6 ಹಾಳೆಗಳು) ಎಂದು ಗುರುತಿಸಿರುತ್ತಾರೆ. ತಾನು ಪಂಚಾಯತಿ ಅಭಿವೃದ್ದಿ ಅಧಿಕಾರಿಯಾದ ಆ.ಸ.ನೌ–2 ರವರು ನಿಯಮಬಾಹಿರವಾಗಿ ಪಂಚಾಯತಿಯಲ್ಲಿ ಖಾತೆಗಳನ್ನು ಮಾಡಿದ್ದರಿಂದ ಅವರ ವಿರುದ್ಧ ದೂರನ್ನು ಸಲ್ಲಿಸಿರುವುದಾಗಿ ನುಡಿದಿರುತ್ತಾರೆ.

18) **ದೂರುದಾರ/ಪಿಡಬ್ಲ್ಯೂ–1 ರವರನ್ನು ಆ.ಸ.ನೌ–1 ರವರ ವಕೀಲರು ಪಾಟೀ ಸವಾಲು ವಿಚಾರಣೆಗೊಳಪಡಿಸಿದ್ದು ತನ್ನ ಪಾಟೀ ಸವಾಲಿನಲ್ಲಿ,** ತನಗೆ ಈ ಲೇಔಟ್ ಮಾಡಿದ ನಂತರ ಇದರ ಬಗ್ಗೆ ಮಾಹಿತಿ ಬಂದಿದ್ದರಿಂದ, ತಾನು ಮಾಹಿತಿ ಕೇಳಿ ಮಾಹಿಡಿ ಹಕ್ಕಿನಡಿಯಲ್ಲಿ ಪಂಚಾಯತಿಗೆ ಅರ್ಜಿ ಸಲ್ಲಸಿದ್ದಾಗಿ ನುಡಿದಿರುತ್ತಾರೆ. ಅಲ್ಲದೆ, ಸಾಮಾನ್ಯ ಸಭೆಯಲ್ಲಿ ದೂರು ಸಲ್ಲಿಸುವ ಕಾಲಕ್ಕೆ ಪಂಚಾಯತಿಯ ಕಾರ್ಯದರ್ಶಿ, ಅಭಿವೃದ್ಧಿ ಅಧಿಕಾರಿ ಮತ್ತು ಅಧ್ಯಕ್ಷರು ಮೂರು ಜನರು ಇದ್ದಿರುತ್ತಾರೆಂದು ನುಡಿದಿರುತ್ತಾರೆ. ಅಲ್ಲದೆ, ಈ ದೂರುದಾರರು ಈ ಬಗ್ಗೆ ತಾಲ್ಲೂಕು ಪಂಚಾಯತಿ

ಮತ್ತು ಜಿಲ್ಲಾ ಪಂಚಾಯತಿಗೆ ಸಲ್ಲಿಸಿದ ದೂರಿನ ಅನ್ವಯ ಯಾವುದೇ ಕ್ರಮ ಜರುಗಿರಿಸುರುವುದಿಲ್ಲವೆಂಬುದು ಸ್ಪಷ್ಟವಾಗುತ್ತದೆ.

**19) ದೂರುದಾರ/ಪಿಡಬ್ಲ್ಯೂ-1 ರವರನ್ನು ಆ.ಸ.ನೌ-2 ರವರ ವಕೀಲರು ಪಾಟೀ ಸವಾಲು ವಿಚಾರಣೆಗೊಳಪಡಿಸಿದ್ದು, ತನ್ನ ಪಾಟೀ ಸವಾಲಿನಲ್ಲಿ,** ನಿ.ಪಿ-6 (20 ಹಾಳೆಗಳುಳ್ಳ ತೆರಿಗೆ ನಿರ್ಧಾರಣಾ ಪಟ್ಟಿ) ಅಸಲು ದಾಖಲೆಗಳನ್ನು ಖುದ್ದಾಗಿ ಯಾರು ಬರೆದಿರುತ್ತಾರೆ ಮತ್ತು ಯಾವಾಗ ಬರೆದಿರುತ್ತಾರೆ ಎಂಬುದು ತನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ಅಲ್ಲದೆ, ನಿ.ಡಿ-4 ರ 13 ನೇ ಹಾಳೆಯಲ್ಲಿ ಬರೆದಿರುವ ಷರಾ ಈ ಆ.ಸ.ನೌ ರವರು ಬರೆದಿರುವ ಷರಾ ಇರುವುದಾಗಿ ಸೂಚಿಸಿದಾಗ ತನಗೆ ಗೊತ್ತಿಲ್ಲವೆಂದು ಉತ್ತರಿಸಿರುತ್ತಾರೆ. ಮುಂದುವರೆದು, ಸದರಿ ವಿವಾದಿತ ಖಾತೆಗಳು ರದ್ದಾಗದೆ ಈಗಲೂ ಮುಂದುವರೆದಿರುವುದನ್ನು ಒಪ್ಪಿಕೊಂಡಿರುತ್ತಾರೆ. ಮುಂದುವರೆದು, ಈ ಸಾಕ್ಷಿದಾರರಿಗೆ ಈ ಆ.ಸ.ನೌ-2 ರವರ ಪರ ವಕೀಲರು ಸೂಚಿಸಿದಾಗ ಈ ಕೆಳಕಂಡಂತೆ ನುಡಿದಿರುತ್ತಾರೆ.

**" ಆ.ಸ.ನೌ-2 ರವರು ಪಂಚಾಯತಿಯ ಖಾತೆಗಳನ್ನು ಮಾಡಿರುವುದಾಗಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾಖಲೆಗಳನ್ನು ಪರಿಶೀಲಿಸಿದ ನಂತರ ಆ.ಸ.ನೌ-2 ರವರು ಖಾತಾ ವರ್ಗಾವಣಾ ಮಾಡಿರುವುದಾಗಿ ಅಭಿಪ್ರಾಯಿಸಿ ಹೇಳಿರುತ್ತೇನೆ ಎಂದರೆ ಸರಿ. ನಿ.ಪಿ-6 ಮತ್ತು 7 ನಾನು ನೋಡಿದ ದಾಖಲಾತಿಗಳು ಎಂದರೆ ಸರಿ".** ಈ ರೀತಿ ಸೂಚಿಸಿರುವುದನ್ನು ಪರಿಶೀಲಿಸಿದಾಗ ದಾಖಲೆಗಳ ಆಧಾರದ ಮೇಲೆ ಈ ಆ.ಸ.ನೌ-2 ರವರೆ ಖಾತಾ ವರ್ಗಾಯಿಸಿರುವುದಾಗಿ ಹೇಳಿರುವುದು ಕಂಡು ಬರುತ್ತದೆ.

20) **ಆ.ಸ.ನೌ–1/ಡಿಡಬ್ಲ್ಯೂ–1 ರವರು** ಸದರಿ ಪಂಚಾಯತಿಯಲ್ಲಿ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿರುವುದನ್ನು ಒಪ್ಪಿಕೊಂಡಿರುತ್ತಾರೆ. ದಿನಾಂಕ: 08/08/2011 ರಂದು ಪಾಸು ಮಾಡಲಾದ ಠರಾವಿನ ದೃಢೀಕೃತ ಪ್ರತಿ ನಿಶಾನೆ ಡಿ–2 (4 ಹಾಳೆಗಳು) ಎಂದು ಗುರುತಿಸಿರುತ್ತಾರೆ. ಸದರಿ ಠರಾವಿನ 8ನೇ ವಿಷಯ ಈ ವಿವಾದಿತ ಸರ್ವೆ ನಂಬರ್‌ಗಳಲ್ಲಿ ವಿಗಂಡಿಸಿರುವ ಸುಮಾರು 86 ನಿವೇಶನಗಳಿಗೆ ಖಾತಾ ಮಾಡುವ ಬಗ್ಗೆ ಠರಾವು ಪಾಸು ಮಾಡಲಾಗಿದ್ದು, ಸದರಿ ಠರಾವಿಗೆ ಹಾಜರಿದ್ದ ಈ ಆ.ಸ.ನೌ–2 ಪಿಡಿಓ ರವರು ಕಾನೂನುಬಾಹಿರವೆಂದು ತಿಳಿಸಿದ್ದಾಗಿ ಷರಾ ಬರೆದಿರುತ್ತಾರೆ. ದಿನಾಂಕ 09/03/2012 ರಂದು ಕಲ್ಕುಂಟೆ ಗ್ರಾಮ ಪಂಚಾಯತಿಯಲ್ಲಿ ಪಾಸು ಮಾಡಲಾದ ಠರಾವಿನ ಪ್ರತಿ ನಿಶಾನೆ ಡಿ–3 ( 8 ಹಾಳೆಗಳು) ಕ್ರಮ ಸಂಖ್ಯೆ 9 ( 3ನೇ ಹಾಳೆ) ಯಲ್ಲಿ ಪಂಚಾಯತಿ ಕಾರ್ಯದರ್ಶಿಗೆ ಖಾತಾ ನಕಲು ನೀಡಲು ಅಧಿಕಾರ ನೀಡಿದ ಬಗ್ಗೆ ಸದರಿ ದಾಖಲೆಯನ್ನು ಗುರುತಿಸಿಕೊಂಡಿರುತ್ತಾರೆ. ಠರಾವಿನಂತೆ ಕಲ್ಕುಂಟೆ ಅಗ್ರಹಾರ ಗ್ರಾಮ ಪಂಚಾಯತಿಯಲ್ಲಿ ಖಾತಾ ನಮೂದು ಮಾಡಿರುವ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿದ್ದು, ಅದು ನಿಶಾನೆ ಡಿ–4 ( 13 ಹಾಳೆಗಳು) ಎಂದು ಗುರುತಿಸಿಕೊಂಡಿದ್ದಾರೆ, 13ನೇ ಹಾಳೆಯಲ್ಲಿ ಸದರಿ ಪಂಚಾಯತಿಯ ಪಿಡಿಓ ರವರೇ ಷರಾ ಬರೆದು ಸಹಿ ಮಾಡಿರುವುದು ಕಂಡು ಬರುತ್ತದೆ. ಡಿಡಬ್ಲ್ಯೂ–1 ರವರು ಮುಂದುವರೆದು ಆ.ಸ.ನೌ–2 ರವರು ನೀಡಿದ ಕಂದಾಯ ರಸೀದಿಯ ಜೆರಾಕ್ಸ್ ಪ್ರತಿಯನ್ನು ನಿಶಾನೆ ಡಿ–5 ಎಂದು, ವಿವಾಧಿತ ಸೈಟ್ ನಂ: 26ಕ್ಕೆ ಆ.ಸ.ನೌ–2 ರವರು ದಿನಾಂಕ: 02/08/2012 ರಂದು ನೀಡಿದ ದೃಢೀಕರಣ ಪತ್ರದ ಜೆರಾಕ್ಸ್ ಪ್ರತಿಯನ್ನು ನಿಶಾನೆ ಡಿ–6 ಎಂದು ಗುರುತಿಸಿಕೊಂಡಿದ್ದು, ಸದರಿ ದಾಖಲೆಯನ್ನು ಪರಿಶೀಲಿಸಿದಾಗ, ಈ ಆ.ಸ.ನೌ–2 ರವರು ಖಾತಾ ನಂ. 273/16 ದಲ್ಲಿನ ಆಸ್ತಿ ನಂ. 26 ಕ್ಕೆ ಸಂಬಂಧಿಸಿದಂತೆ ಈ ವಿವಾದಿತ ಖಾತಾಗಳ ಬಗ್ಗೆ ದೃಢಿಕರಣ ಪತ್ರ ನೀಡಿರುವುದು ಕಂಡು

ಬರುತ್ತದೆ. ಅದೇ ಪ್ರಕಾರ ಈ ನಿವೇಶನ ನೊಂದಣಿಯಾಗಲು ಆ.ಸ.ನೌ-2 ರವರು ನೀಡಿದ ನಮೂನೆ-12ರ ಜೆರಾಕ್ಸ್ ಪ್ರತಿಯನ್ನು ನಿಶಾನೆ ಡಿ-7 ಎಂದು ಗುರುತಿಸಿಕೊಂಡಿದ್ದು, ಈ ಎರಡು ದಾಖಲೆಗಳನ್ನು ಪರಿಶೀಲಿಸಿದಾಗ, ಈ ಆ.ಸ.ನೌ-2 ರವರು ಸದರಿ ವಿವಾದಿತ ನಿವೇಶನಗಳಿಗೆ ಸಂಬಂಧಿಸಿದಂತೆ ಧೃಢಿಕರಣ ಪತ್ರ ಮತ್ತು ನಮೂನೆ 12 ರ ತೆರಿಗೆಗಳ ಬೇಡಿಕೆ ರಿಜಿಸ್ಟರ್ ಪ್ರತಿ ನೀಡಿರುವುದು ಕಂಡು ಬರುತ್ತದೆ. ಮುಂದುವರೆದು, ಈ ಆ.ಸ.ನೌ-1 ರವರು ತನ್ನ ಮುಖ್ಯ ವಿಚಾರಣೆಯಲ್ಲಿ, ಈ ಆ.ಸ.ನೌ-2 ರವರು ಕ್ರಮ ಸಂಖ್ಯೆ 18ರ ಕಂದಾಯ ರಸೀದಿ ಪುಸ್ತಕವನ್ನು ತನ್ನ ಸುಪರ್ಧಿನಲ್ಲಿ ಇಟ್ಟುಕೊಂಡಿದ್ದ ಬಗ್ಗೆ ಮತ್ತು ರಸೀದಿ ಪುಸ್ತಕ ನಂ: 15268ರ ಪುಸ್ತಕ ಆ.ಸ.ನೌ-2 ರವರ ಬಳಿಯೇ ಇದ್ದ ಬಗ್ಗೆ ಸ್ಟಾಕ್ ರಿಜಿಸ್ಟರ್ ಪುಸ್ತಕದ ದೃಢೀಕೃತ ಪ್ರತಿಯನ್ನು ಹಾಜರ್‌ಪಡಿಸಿ ನಿಶಾನೆ ಡಿ-8 ( 3 ಹಾಳೆಗಳು) ಎಂದು ಗುರುತಿಸಿಕೊಂಡಿರುತ್ತಾರೆ. ಮುಂದುವರೆದು, ಆಡಿಟ್ ವರದಿಯಲ್ಲಿ ಆ.ಸ.ನೌ-2 ರವರು ರಸೀದಿ ಪುಸ್ತಕ 15268 ಹಾಜರುಪಡಿಸಿರುವುದಿಲ್ಲವೆಂದು ಉಲ್ಲೇಖಿಸಿರುವ ಬಗ್ಗೆ ಆಡಿಟ್ ವರದಿಯ ದೃಢೀಕೃತ ಪ್ರತಿಯನ್ನು ಹಾಜರ್‌ಪಡಿಸಿ, **ನಿಶಾನೆ ಡಿ-9 ( 4 ಹಾಳೆಗಳು)** ಎಂದು ಗುರುತಿಸಿಕೊಂಡಿರುತ್ತಾರೆ. ಈ **ನಿ.ಡಿ-9** ನ್ನು ಪರಿಶೀಲಿಸಿದಾಗ ಕ್ರಮಸಂಖ್ಯೆ 19 (ಆ) ಎಂದು ತೋರಿಸಿರುವ ಕಂಡಿಕೆಯಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಿರುತ್ತಾರೆ.

**" 2012-13ನೇ ಸಾಲಿನ ಕಲ್ಕುಂಟೆ ಅಗ್ರಹಾರ ಗ್ರಾಮಪಂಚಾಯತಿಯ ರಸೀತಿ ದಾಸ್ತಾನು ವಹಿ ಮತ್ತು ಹಾಜರ್‌ಪಡಿಸಿರುವ ರಸೀತಿ ಹಾಗೂ ಬೌತಿಕ ಪರಿಶೀಲನೆ ನಡಸಿದಾಗ ರಸೀತಿ ಪುಸ್ತಕ ಸಂಖ್ಯೆ 15268 ರಸೀತಿ ಸಂಖ್ಯೆ 763351 ರಿಂದ 763400 ದವರೆಗಿನ ರಸೀತಿಗಳಿರುವ ರಸೀತಿ ಪುಸ್ತಕವನ್ನು ಲೆಕ್ಕತನಿಖೆಗೆ ಹಾಜರ್‌ಪಡಿಸಿರುವುದಿಲ್ಲ. ಈ ಬಗ್ಗೆ ಲೆಕ್ಕ ವಿಚಾರಣಾ ಪತ್ರ ಸಂಖ್ಯೆ 1/2012-13 ದಿನಾಂಕ**

**24.10.2013 ಅನ್ನು ಜಾರಿಗೊಳಿಸಿದಾಗ್ಯೂ ಯಾವುದೇ ಉತ್ತರ ಸಲ್ಲಿಸಿರುವುದಿಲ್ಲ. ಇದರಿಂದ ಸದರಿ ರಶೀದಿ ಪುಸ್ತಕವನ್ನು ಉಪಯೋಗಿಸಲಾಗಿದೆಯೇ ಅಥವಾ ಇಲ್ಲವೋ ಎಂಬ ಮಾಹಿತಿ ಲೆಕ್ಕ ತನಿಖೆಗೆ ಲಭ್ಯವಾಗಿರುವುದಿಲ್ಲ. ಒಂದು ವೇಳೆ ಸದರಿ ರಶೀದಿ ಪುಸ್ತಕವನ್ನು ಉಪಯೋಗಿಸಿ ಹಣ ದುರುಪಯೋಗವಾಗಿದ್ದಲ್ಲಿ ಸಂಬಂಧಿಸಿದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಕರವಸೂಲಿಗಾರರು ಕಾರಣರಾಗಿರುತ್ತಾರೆ. ಈ ಬಗ್ಗೆ ಸೂಕ್ತ ತನಿಖೆ ನಡೆಸಿ ಕ್ರಮ ತೆಗೆದುಕೊಳ್ಳಲು ಸಕ್ಷಮ ಪ್ರಾಧಿಕಾರವಾದ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಹೊಸಕೋಟೆ ರವರಿಗೆ ಸೂಚಿಸಿದೆ".** ಈ ರೀತಿ ಲೆಕ್ಕ ತನಿಖಾ ವರದಿಯಲ್ಲಿ ಉಲ್ಲೇಖಿಸಿರುವುದನ್ನು ಪರಿಶೀಲಿಸಿದಾಗ, ಈ ಸದರಿ ಪಂಚಾಯತಿಯ ರಶೀದಿ ದಾಸ್ತಾನು ವಹಿಯಂತೆ 2012–13ನೇ ಸಾಲಿಗೆ ಸಂಬಂಧಿಸಿದ ಪುಸ್ತಕ ಸಂಖ್ಯೆ 15268 ಹಾಗೂ ರಶೀದಿ ಸಂಖ್ಯೆ 763351 ರಿಂದ 763400 ರವರೆಗಿನ ರಶೀದಿ ಪುಸ್ತಕವನ್ನು ಈ ಆ.ಸ.ನೌ–2 ರವರು ಹಾಜರ್‌ಪಡಿಸಿರುವುದಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಸದರಿ ರಶೀದಿಗಳು ದುರಪಯೋಗವಾಗಿದ್ದಲ್ಲಿ ಅದಕ್ಕೆ ಸಂಬಂಧಪಟ್ಟ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ತೆರಿಗೆ ವಸೂಲಿಗಾರರೇ ಕಾರಣಕರ್ತರಾಗಿರುತ್ತಾರೆಂದು ಆ ಬಗ್ಗೆ ಸೂಕ್ತ ತನಿಖೆ ನಡೆಸಿ ಕ್ರಮಕೈಗೊಳ್ಳಲು ಹೊಸಕೋಟೆ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿರುವುದಾಗಿ ಉಲ್ಲೇಖಿಸಿರುವುದು ಕಂಡುಬರುತ್ತದೆ. ಯಾವ ಕಾರಣಕ್ಕಾಗಿ ಈ ಆ.ಸ.ನೌ–2 ರವರು ಸದರಿ ತೆರಿಗೆ ರಶೀದಿಗಳನ್ನು ಲೆಕ್ಕಪತ್ರ ತಪಾಸಣಾ ಅಧಿಕಾರಿಗಳ ಮುಂದೆ ಹಾಜರ್‌ಪಡಿಸಿರುವುದಿಲ್ಲ ಎಂಬ ಬಗ್ಗೆ ಸಮಜಾಯಿಷಿಯನ್ನು ಈ ವಿಚಾರಣೆಯಲ್ಲಿ ನೀಡಿರುವುದಿಲ್ಲ. ಆದರೆ, ತಾನು ವಿವಾದಿತ ಖಾತಾಗಳನ್ನು ನೊಂದಾಯಿಸಿರುವುದಿಲ್ಲವೆಂದು, ಆ.ಸ.ನೌ–1 ರವರೆ ನಮೂದು ಮಾಡಿರುವುದಾಗಿ ವಾದಿಸಿರುತ್ತಾರೆ. ಈ ಬಗ್ಗೆ ತನ್ನ ಮೇಲಾಧಿಕಾರಿಯಾದ ಆ.ಸ.ನೌ–2 ರವರು ತನಗೆ ಯಾವುದೇ

ನೋಟಿಸ್ ನೀಡಿರುವುದಿಲ್ಲವೆಂದು ಹಾಗೂ ತನ್ನ ಮೇಲಾಧಿಕಾರಿಗಳಾದ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಹ ತಾನು ದುರ್ನಡತೆ ಎಸಗಿರುವುದಾಗಿ ದೂರು ಸಲ್ಲಿಸಿರುವುದಿಲ್ಲವೆಂದು ಈ ಆ.ಸ.ನೌ–1 ರವರು ನುಡಿದಿರುತ್ತಾರೆ. ಈ ಆ.ಸ.ನೌ–1/**ಡಿಡಬ್ಲ್ಯೂ–1** ರವರಿಗೆ ಮಂಡನಾಧಿಕಾರಿಗಳು ಈ ವಿವಾದಿತ ನಿವೇಶನ ನೊಂದಣಿಯಾಗಲು ತಾನು ನಿವೇಶನದ ಫಾರ್ಮ ನಂ. 9 ಮತ್ತು 11 ನ್ನು ನೀಡಿರುವುದಾಗಿ ಸೂಚಿಸಿದ್ದನ್ನು ನಿರಾಕರಿಸಿರುತ್ತಾರೆ. ಈ ಸಾಕ್ಷಿದಾರನಿಗೆ ಆ.ಸ.ನೌ–2 ರವರ ಪರ ವಕೀಲರು ಸಹ ಪಾಟೀ ಸವಾಲು ವಿಚಾರಣೆ ಮಾಡಿದ್ದು ತನ್ನ ಪಾಟೀ ಸವಾಲಿನಲ್ಲಿ **ನಿ.ಡಿ–11** ಸುತ್ತೋಲೆಯ ಪ್ರಕಾರ ಕಾರ್ಯದರ್ಶಿಯ ಜವಾಬ್ದಾರಿಗಳ ಬಗ್ಗೆ ಕ್ರಮಸಂಖ್ಯೆ 3 ರಲ್ಲಿ ಹೇಳಿದಂತೆ ವಾರ್ಡ್ ಸಭೆ, ಗ್ರಾಮಸಭೆ, ಸ್ಥಾಯಿಸಮಿತಿ ಸಭೆ ಮತ್ತು ಇನ್ನಿತರ ಸಭೆಗಳನ್ನು ನಡೆಸುವುದು ಹಾಗೂ ನಿರ್ಣಯಗಳನ್ನು ದಾಖಲಿಸುವುದು ಮತ್ತು ಜಾರಿಗೊಳಿಸುವುದು ಕಾರ್ಯದರ್ಶಿಯ ಜವಾಬ್ದಾರಿ ಇರುವುದಾಗಿ ಸೂಚಿಸಿದ್ದನ್ನು ನಿಜವೆಂದು ಒಪ್ಪಿಕೊಂಡಿರುತ್ತಾರೆ. ಅದೇ ಪ್ರಕಾರ **ನಿ.ಡಿ.–11** ರಂತೆ ಗ್ರಾಮಪಂಚಾಯತಿಯು ನಿರ್ವಹಿಸಬೇಕಾದ ವಿವಿಧ ವಹಿಗಳ ನಿರ್ವಹಣೆ ಕಾರ್ಯದರ್ಶಿಯ ಕರ್ತವ್ಯ ಇರುವುದಾಗಿ ಸೂಚಿಸಿದ್ದನ್ನು ನಿಜವೆಂದು ಒಪ್ಪಿಕೊಂಡಿರುತ್ತಾರೆ. ಮುಂದುವರೆದು, ನಿ.ಡಿ–4 ರ 13ನೇ ಹಾಳೆಯಲ್ಲಿ ಕ್ರಮಸಂಖ್ಯೆ 1 ರಿಂದ 86 ವರೆಗೆ ನಮೂದು ಮಾಡಲಾಗಿದ್ದು, ಅದರಲ್ಲಿ ಕ್ರಮಸಂಖ್ಯೆ–1, 19 ಹಾಗೂ 29 ಹೆಸರುಗಳನ್ನು ನಮೂದು ಮಾಡಿರುವುದಾಗಿ ಹಾಗೂ ಉಳಿದ ಸಂಖ್ಯೆಗಳನ್ನು ಹಾಗೂ ಹೆಸರುಗಳನ್ನು ತಾನು ನಮೂದು ಮಾಡಿರುವುದಿಲ್ಲವೆಂದು, ಈ ಆ.ಸ.ನೌ–2 ರವರು ದೃಢೀಕರಿಸಿರುತ್ತಾರೆ ಎಂದು ಸೂಚಿಸಿದ್ದನ್ನು ಪಾಟೀ ಸವಾಲಿನಲ್ಲಿ ನಿಜವೆಂದು ಈ ಆ.ಸ.ನೌ–1 ರವರು ಒಪ್ಪಿಕೊಂಡಿರುತ್ತಾರೆ.

21) ಮುಂದುವರೆದು, ಈ ಆ.ಸ.ನೌ-1 ರವರಿಗೆ ನಿ.ಡಿ-5 ದಾಖಲೆಯನ್ನು ತೋರಿಸಿ ಇದನ್ನು ದಿನಾಂಕ 03.05.2012 ರಂದು ನೀಡಲಾಗಿದ್ದು, ಸದರಿ ದಾಖಲೆಯಲ್ಲಿ ಕಾಣಿಸಿದಂತೆ ಖಾತಾ ನಂ. 273/16 ಆದ ರಶೀದಿಯಲ್ಲಿ ಕಾಣಿಸಲಾದ ಶ್ರೀ ಬಿ. ರಾಜು, ಶ್ರೀ ಸಿ.ಎಲ್. ಕೃಷ್ಣಮೂರ್ತಿ ಮತ್ತು ಲಕ್ಷ್ಮೀನಾರಾಯಣ ರವರ ಹೆಸರಿನಲ್ಲಿ ಅಸೆಸ್‌ಮೆಂಟ್ ರಿಜಿಸ್ಟರ್, ಡಿಮ್ಯಾಂಡ್ ರಿಜಿಸ್ಟರ್‌ನಲ್ಲಿ ಸದರಿಯವರುಗಳ ಹೆಸರು ದಿನಾಂಕ 03.05.2012 ರಂದು ಇದ್ದಿರುವುದನ್ನು ನಿಜವೆಂದು ಒಪ್ಪಿಕೊಂಡಿರುತ್ತಾರೆ. ನಿ.ಡಿ-6 ರ ಪ್ರಕಾರ ದಿನಾಂಕ 02.08.2012 ರಂದು ಸದರಿ ಖಾತಾ ನಂ 273/16 ಸದರಿ ಮೂರು ಜನರ ಹೆಸರಿನಲ್ಲಿರುವುದನ್ನು ಒಪ್ಪಿಕೊಂಡಿರುತ್ತಾರೆ. ಅದೇ ಪ್ರಕಾರ ನಿ.ಡಿ-13 ರಲ್ಲಿ ತೋರಿಸಿದಂತೆ ಆ.ಸ.ನೌ-2 ರವರ ಸಹಿಯನ್ನು ನಕಲು ಮಾಡಿ ನಮೂನೆ 12 ರ ತೆರಿಗೆಗಳ ಬೇಡಿಕೆ ರಿಜಿಸ್ಟರ್ ನೀಡಿರುವುದಾಗಿ ಮತ್ತು ಸದರಿ ದಾಖಲೆಗಳ ಆಧಾರದ ಮೇಲೆ ಆ ಆಸ್ತಿಗಳು ಹೊಸಕೋಟೆ ತಾಲ್ಲೂಕು ನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿಯಾಗಿರುವುದಾಗಿ ಫಲಾನುಭವಿಗಳು ತಿಳಿಸಿರುತ್ತಾರೆಂದು, ಆ ಅವ್ಯವಹಾರ ಕೃತ್ಯವನ್ನು ಪಂಚಾಯತಿ ಸಿಬ್ಬಂದಿಯವರು ನಡೆಸಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದಾಗಿ ಮತ್ತು ಈ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಹೊಸಕೋಟೆ ಹಾಗೂ ಸಹಾಯಕ ಲೆಕ್ಕಾಧಿಕಾರಿಗಳು, ತಾಲ್ಲೂಕು ಪಂಚಾಯತಿ ಹೊಸಕೋಟೆ ರವರ ಸಹಯೋಗದೊಂದಿಗೆ ಜಂಟಿ ವಿಚಾರಣೆ ನಡೆಸಲು ದಿನಾಂಕ 13.08.2014 ರಂದು ಕಲ್ಕುಂಟೆ ಅಗ್ರಹಾರ ಗ್ರಾಮಪಂಚಾಯತಿಗೆ ಭೇಟಿ ನೀಡುವುದಾಗಿ ತಿಳಿಸಿ ಮತ್ತು ವಿಚಾರಣೆಗೆ ಹಾಜರ್‌ಇರುವಂತೆ ನೀಡಿದ ನೋಟಿಸ್ ಪ್ರತಿ **ನಿ.ಡಿ-13** ಆಗಿರುತ್ತದೆ. **ನಿ.ಡಿ-14** ದಿನಾಂಕ 08.08.2011 ರ ಮೀಟಿಂಗ್ ಪ್ರೊಸಿಡಿಂಗ್ಸ್‌ನ ಪುಸ್ತಕದ ಪ್ರತಿಯಾಗಿರುತ್ತದೆ, **ನಿ.ಡಿ.-14(ಎ)** ಷರಾ ಇದ್ದು ಈ ವಿವಾದಿತ ವಿಷಯಕ್ಕೆ ಸಂಬಂಧಿಸಿದಂತೆ ಪಾಸು

ಮಾಡಲಾದ ಠರಾವಿನ ಸಂದರ್ಭದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಾಜರ್‌ಇದ್ದು, ಸದರಿ ವಿಷಯವು ಕಾನೂನುಬಾಹಿರವೆಂದು ತಿಳಿಸಿದ ಬಗ್ಗೆ ಬರೆದ ಷರಾ ಇರುವುದಾಗಿ ಗುರುತಿಸಿಕೊಂಡಿರುತ್ತಾರೆ. **ನಿ.ಡಿ.–15** ದಿನಾಂಕ 09.03.2012 ರಂದು ಪಾಸು ಮಾಡಲಾದ ಸಾಮಾನ್ಯ ಸಭೆಯ ಠರಾವಿನ ಪ್ರತಿಯಿದ್ದು ಅದರಂತೆ, ನಿ.ಡಿ.–15(ಎ) ನಮೂದನೆಯು ಪಂಚಾಯತಿಯ ಅಭಿವೃದ್ಧಿ ಅಧಿಕಾರಿಗೆ ಕೆಲಸದ ಒತ್ತಡ ಹೆಚ್ಚಾಗಿರುವುದರಿಂದ, ಅವಶ್ಯಕ ದಾಖಲೆಗಳನ್ನು ನೀಡಲು ಕಾರ್ಯದರ್ಶಿಗೆ ಅಧಿಕಾರ ನೀಡಬಹುದೆಂದು ಸಾಮಾನ್ಯ ಸಭೆಯಲ್ಲಿ ಪಾಸು ಮಾಡಲಾದ ಠರಾವಿನ ಪ್ರತಿಯಾಗಿರುತ್ತದೆ. **ನಿ.ಡಿ.–16** ಈ ಆಸನೌ ರವರು ದಿನಾಂಕ 08.07.2014 ರಂದು ಹೊಸಕೋಟೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತನ್ನ ಸಹಿ ನಕಲು ಮಾಡಿ ಈ ವಿವಾದಿತ ಜಮೀನಿನಲ್ಲಿರುವ ನಿವೇಶನಗಳಿಗೆ ನಮೂನೆ 1 ಮತ್ತು 12 (9 ಮತ್ತು 11) ಹಾಗೂ ಧೃಢಿಕರಣ ಪತ್ರ ನೀಡಿರುವುದಾಗಿ, ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮವಹಿಸಬೇಕೆಂದು ಕೋರಿ ಬರೆದ ಪತ್ರವಾಗಿರುತ್ತದೆ. ಮುಂದುವರೆದು, ಸದರಿ ಪತ್ರದಲ್ಲಿ ಸಹಿ ನಕಲು ಮಾಡಿರುವ ಪ್ರತಿಯನ್ನು ಲಗತ್ತಿಸಿರುವುದಾಗಿ ಹೇಳಿರುತ್ತಾರೆ, ಆದರೆ ಈ ವಿಚಾರಣಾ ಪ್ರಾಧಿಕಾರದ ಮುಂದೆ ಸದರಿ ಪ್ರತಿಯನ್ನು ಹಾಜರ್‌ಪಡಿಸಿರುವುದಿಲ್ಲ. **ನಿ.ಡಿ–17** ಈ ಆ.ಸ.ನೌ–2 ರವರು ಈ ಲೋಕಾಯುಕ್ತ ಸಂಸ್ಥೆಗೆ ಸಲ್ಲಿಸಿದ ಆಕ್ಷೇಪಣೆಯ ಪ್ರತಿಯಾಗಿರುತ್ತದೆ. **ನಿ.ಡಿ–18** ಸದರಿ ವಿವಾದಿತ ಖಾತಾಗಳನ್ನು ರದ್ದುಪಡಿಸಲು ತೆಗೆದುಕೊಂಡ ನಿರ್ಣಯದ ಪ್ರತಿಯಾಗಿರುತ್ತದೆ. ನಿ.ಡಿ–19 ಪತ್ರವು ಜಿಲ್ಲಾಪಂಚಾಯತ್ ಸಿ.ಇ.ಓ ರವರು ಈ ಅಕ್ರಮ ಖಾತೆಗಳನ್ನು ರದ್ದುಗೊಳಿಸುವ ಬಗ್ಗೆ ಹಾಗೂ ಅದಕ್ಕೆ ಕಾರಣಕರ್ತರಾದ ಪಂಚಾಯತ್ ಅಧ್ಯಕ್ಷರ ವಿರುದ್ಧ ಸೂಕ್ತ ಕಾನೂನುಕ್ರಮ ಜರುಗಿಸುವ ಬಗ್ಗೆ ತಾಲ್ಲೂಕು ಪಂಚಾಯತ್ ಪ್ರಭಾರಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಬರೆದ ಪತ್ರವಾಗಿರುತ್ತದೆ. ನಿ.ಡಿ–20 ದಾಖಲೆಯು

ದಿನಾಂಕ 18.09.2018 ರಂದು, ಈ ವಿವಾದಿತ ಖಾತಾಗಳನ್ನು ರದ್ದುಗೊಳಿಸುವ ಬಗ್ಗೆ ಪಾಸು ಮಾಡಲಾದ ಸಾಮಾನ್ಯಸಭೆಯ ನಡಾವಳಿ ಮತ್ತು ರದ್ದುಗೊಳಿಸಿರುವುದನ್ನು ತೋರಿಸಲು ನೀಡಿದ ಕರಾ ನಿರ್ಧರಣಾ ಪಟ್ಟಿಯಾಗಿರುತ್ತದೆ.

22) ಈ ಪ್ರಕರಣದಲ್ಲಿ ಈ ವಿವಾದಿತ ಖಾತಾ ವರ್ಗಾವಣೆಯಾಗುವ ಸಂದರ್ಭದಲ್ಲಿ ಆ.ಸ.ನೌ–1 ರವರು ಸದರಿ ಗ್ರಾಮಪಂಚಾಯತಿಯ ಕಾರ್ಯದರ್ಶಿ ಮತ್ತು ಆ.ಸ.ನೌ–2 ರವರು ಗ್ರಾಮಪಂಚಾಯತಿಯ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುವುದು ನಿರ್ವಿವಾದ. ಆ.ಸ.ನೌ–1 ರವರು ಕಾರ್ಯದರ್ಶಿಯಾಗಿದ್ದು, ತಾನು ಈ ವಿವಾದಿತ ನಿವೇಶನಗಳು ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ನೊಂದಣಿಯಾಗಲು ಅವಶ್ಯಕವಾದ ಫಾರಂ ನಂ. 9 ಮತ್ತು 11 ನೀಡಿರುವುದಿಲ್ಲವೆಂದು ಹೇಳಿರುತ್ತಾರೆ. ಆದರೆ, ಆ.ಸ.ನೌ–2 ರವರು ಈ ಆ.ಸ.ನೌ–1 ರವರೆ ಸದರಿ ಫಾರಂ ನಂ. 9 ಮತ್ತು 11 ನ್ನು ದಿನಾಂಕ 08.08.2011 ರಂದು ಪಾಸು ಮಾಡಲಾದ ಸಾಮಾನ್ಯ ಸಭೆಯ ನಡಾವಳಿಯಂತೆ ನೀಡಿರುವುದಾಗಿ ಹಾಗೂ ಸದರಿ ಸಭೆಯಲ್ಲಿ ತಾನು ಹಾಜರಿದ್ದು, ಈ ರೀತಿ ನಿವೇಶನಗಳಿಗೆ ಫಾರಂ ನಂ. 9 ಮತ್ತು 11 ನೀಡುವುದು ಕಾನೂನುಬಾಹಿರವೆಂದು ತಾನು ಸಭೆಗೆ ತಿಳಿಸಿರುವುದಾಗಿ ವಾದಿಸಿರುತ್ತಾರೆ. ಈ ಬಗ್ಗೆ ಸದರಿ ಮೀಟಿಂಗ್ ನಡಾವಳಿಗಳಾದ ನಿ.ಡಿ–14 ಮತ್ತು ಷರಾ 14(ಎ) ಎಂದು ಗುರುತಿಸಿಕೊಂಡಿರುತ್ತಾರೆ. ನಿ.ಡಿ 14(ಎ) ಷರಾ ಪರಿಶೀಲಿಸಲಾಗಿ ಅದನ್ನು ದೃಢಿಕರಿಸಲು ಯಾವುದೇ ಸಹಿಯಾಗಲಿ ಅಥವಾ ಯಾರ ಸಮಕ್ಷಮದಲ್ಲಿ ಮಾಡಲಾಯಿತೆಂದು ತೋರಿಸಲು ಯಾವುದೇ ಹಿಂಬರಹವಾಗಲಿ ಇರುವುದಿಲ್ಲ. ಅಲ್ಲದೆ, ಸದರಿ ಷರಾದಲ್ಲಿ ಹೇಳಿದ ಸಂಗತಿಯನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಗಳ ಸಮಕ್ಷಮದಲ್ಲಿ ಚರ್ಚಿಸಿದ ಬಗ್ಗೆ ಯಾವುದೇ ನಮೂದನೆ

ಇರುವುದಿಲ್ಲ. ಕಾರಣ, ಈ ಷರಾಗೆ ಯಾವುದೆ ಮಾನ್ಯತೆ ಕಂಡುಬರುವುದಿಲ್ಲ. ಒಂದುವೇಳೆ ಈ ಆ.ಸ.ನೌ-2 ರವರ ವಾದದಂತೆ ಯೋಚಿಸಿದ್ದಾಗಿಯೂ ಸದರಿ ನಡಾವಳಿಯಾದ 10 ದಿನಗಳೊಗಾಗಿ ಕಾರ್ಯನಿರ್ವಾಹಕ ಅಧಿಕಾರಿಗೆ ಈ ಅಕ್ರಮ ನಡಾವಳಿಯ ಬಗ್ಗೆ ಕಾನೂನುಕ್ರಮ ಜರುಗಿಸಲು ಕೋರಿಕೊಳ್ಳಬೇಕಾಗಿದ್ದು, ಆದರೆ, ಈ ರೀತಿ ಸೂಕ್ತ ಸಮಯದಲ್ಲಿ ಕ್ರಮಜರುಗಿಸುವಂತೆ ಕೋರಿಕೊಂಡಿರುವುದು ಕಂಡುಬರುವುದಿಲ್ಲ. ಕಾರಣ, ಈ ಆ.ಸ.ನೌ-2 ರವರು ತಾನು ಸದರಿ ನಡಾವಳಿಯಾಗುವ ಸಂದರ್ಭದಲ್ಲಿ ಹಾಜರಿದ್ದು ಕಾನೂನುರೀತ್ಯಾ ತಕರಾರು ಮಾಡಿರುವುದನ್ನು ರುಜುವಾತುಪಡಿಸುವಲ್ಲಿ ವಿಫಲರಾಗಿರುತ್ತಾರೆ.

23) ಆ.ಸ.ನೌ-1 ರವರು ತಾನು ಕಾರ್ಯದರ್ಶಿಯಾಗಿದ್ದು ದಿನಾಂಕ 09.03.2012 ರಂದು ಪಾಸು ಮಾಡಲಾದ ಠರಾವಿನಂತೆ ಖಾತಾ ನಕಲು ನೀಡಲು ನಿ.ಡಿ-3 ರಂತೆ ಠರಾವು ಪಾಸು ಮಾಡಿರುವುದಾಗಿ ಅದರಲ್ಲಿನ ಕ್ರಮಸಂಖ್ಯೆ 9 ಕಾರ್ಯದರ್ಶಿಗೆ ಖಾತಾ ನಕಲು ನೀಡಲು ಅಧಿಕಾರ ನೀಡಿರುವುದಾಗಿ ಹೇಳಿರುತ್ತಾರೆ. ಖಾತಾ ನಮೂದನೆ ಮಾಡಿರುವ ಬಗ್ಗೆ ನಿ.ಡಿ-4 (13 ಹಾಳೆಗಳು) ತೆರಿಗೆ ರಿಜಿಸ್ಟರ್ ಪ್ರತಿಗಳನ್ನು ಗುರುತಿಸಿಕೊಂಡಿರುತ್ತಾರೆ. ಸದರಿ ದಾಖಲೆಯ 13ನೆಯ ಹಾಳೆಯಲ್ಲಿ ಪಿಡಿಓ ರವರಾದ ಆ.ಸ.ನೌ-2 ರವರು ತಾನು ಕ್ರಮಸಂಖ್ಯೆ 1 ರಿಂದ 86 ರವರೆಗೆ ಮಾಡಲಾದ ನಮೂದನೆಗಳ ಪೈಕಿ, ಕ್ರಮಸಂಖ್ಯೆ 1, 19 ಮತ್ತು 29 ಹೆಸರನ್ನು ನಮೂದು ಮಾಡಿರುವುದಾಗಿ ಉಳಿದ ಕ್ರಮಸಂಖ್ಯೆಗಳನ್ನು ತಾನು ನಮೂದು ಮಾಡಿರುವುದಿಲ್ಲವೆಂದು ದೃಢಿಕರಿಸಿರುವುದು ಕಂಡುಬರುತ್ತದೆ. ಈ ಅಂಶವನ್ನು ಪರಿಶೀಲಿಸಲಾಗಿ ಈ ಆ.ಸ.ನ್-2 ರವರು ಕ್ರಮಸಂಖ್ಯೆ 1, 19 ಮತ್ತು 29 ತಾನು ನಮೂದು ಮಾಡಿರುವುದನ್ನು ಪರೋಕ್ಷವಾಗಿ ಒಪ್ಪಿಕೊಂಡಿರುವುದು

ಕಂಡುಬರುತ್ತದೆ. ಈ ಆ.ಸ.ನೌ-1 ರವರು ಮುಂದುವರೆದು ವಿವಾದಿತ ಸೈಟ್ ನಂ. 26ಕ್ಕೆ ಸಂಬಂಧಿಸಿದಂತೆ ಈ ಆ.ಸ.ನೌ–2 ರವರು ದಿನಾಂಕ 02.08.2012 ರಂದು ನೀಡಿದ ದೃಢಿಕರಣ ಪತ್ರದ ಪ್ರತಿಯನ್ನು **ನಿ.ಡಿ.–6** ಎಂದು ಗುರುತಿಸಿಕೊಂಡಿದ್ದು, ಅದರೊಂದಿಗೆ ನಿವೇಶನ ನೊಂದಣಿಯಾಗಲು ಆ.ಸ.ನೌ–2 ರವರು ನೀಡಿದ ನಮೂನೆ 12 ರ ಪ್ರತಿಯನ್ನು ನಿ.ಡಿ–7 ಎಂದು ಗುರುತಿಸಿರುತ್ತಾರೆ. ಈ ನಿವೇಶನಕ್ಕೆ ಸಂಬಂಧಿಸಿದಂತೆ, ಕಂದಾಯ ರಶೀದಿ ಪುಸ್ತಕವನ್ನು ಸಹ ಆ.ಸ.ನೌ–2 ರವರ ಬಳಿಯೆ ಇದ್ದ ಬಗ್ಗೆ ಸ್ಟಾಕ್ ರಿಜಿಸ್ಟರ್ ಪುಸ್ತಕದ ದೃಢಿಕೃತ ಪ್ರತಿಯನ್ನು ನಿ.ಡಿ–8 ಎಂದು ಗುರುತಿಸಿಕೊಂಡಿದ್ದು, ಆಡಿಟ್ ವರದಿಯಲ್ಲಿ ಈ ಆ.ಸ.ನೌ–2 ರವರು ರಶೀದಿ ಪುಸ್ತಕ ಸಂಖ್ಯೆ 15268 ಹಾಜರ್‌ಪಡಿಸಿರುವುದಿಲ್ಲವೆಂದು ಉಲ್ಲೇಖಿಸಿರುವ ಬಗ್ಗೆ, ಆಡಿಟ್ ವರದಿಯ ದೃಢಿಕೃತ ಪ್ರತಿಯನ್ನು ನಿ.ಡಿ–9 ಎಂದು ಗುರುತಿಸಿಕೊಂಡಿರುತ್ತಾರೆ. ಈಗಾಗಲೇ, ಹೇಳಲಾದಂತೆ ಆಡಿಟ್ ವರದಿಯಲ್ಲಿ ಸದರಿ ರಶೀದಿಪುಸ್ತಕ ಹಾಜರ್‌ಪಡಿಸಿರುವುದಿಲ್ಲವೆಂದು ಉಲ್ಲೇಖಿಸಿರುವ ಬಗ್ಗೆ ಮೇಲೆ ಚರ್ಚಿಸಲಾಗಿದೆ.

24) ಆ.ಸ.ನೌ–1 ರವರು ಕಾರ್ಯದರ್ಶಿಯಾಗಿದ್ದು ಇವರ ಸಮೀಪದ ಮೇಲಿನ ಅಧಿಕಾರಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ/ಆ.ಸ.ನೌ–2 ರವರಾಗಿದ್ದು ಈ ಪ್ರಮಾದವಾದ ತಕ್ಷಣವೆ ಈ ಆ.ಸ.ನೌ–2 ರವರು ಈ ಆ.ಸ.ನೌ–1 ರವರ ವಿರುದ್ಧ ದುರ್ನಡತೆ ತೋರಿದಬಗ್ಗೆಯಾಗಲೀ ಅಥವಾ ಕರ್ತವ್ಯಲೋಪವೆಸಗಿದ ಹಿರಿಯ ಅಧಿಕಾರಿಗಳಿಗೆ ಕಾನೂನುಕ್ರಮಕ್ಕಾಗಿ ವಿನಂತಿಸಿರುವುದಿಲ್ಲ. ಯಾವ ಕಾರಣಕ್ಕಾಗಿ ತಾನು ಕ್ರಮ ಜರುಗಿಸುವಲ್ಲಿ ಪ್ರಯತ್ನಿಸಿರುವುದಿಲ್ಲವೆಂದು ವಿಶದೀಕರಿಸಿರುವುದಿಲ್ಲ.

25) ಆ.ಸ.ನೌ–2 ರವರು ತನ್ನ ಸಹಿ ನಕಲು ಮಾಡಿ ದಾಖಲೆಗಳನ್ನು ಸೃಷ್ಟಿಸಿರುವುದಾಗಿ ವಾದಿಸಿರುತ್ತಾರೆ. ಈ ಸಂಬಂಧ ಏನು ಕ್ರಮ ಜರುಗಿಸಲಾಯಿತು ಎಂಬ ಬಗ್ಗೆ ಅಂತಿಮ ನಿರ್ಣಯದ ದಾಖಲೆಯನ್ನು ಹಾಜರ್‌ಪಡಿಸಿರುವುದಿಲ್ಲ. ಈ ಆ.ಸ.ನೌ–2 ರವರು **ನಿ.ಡಿ–4** ರಲ್ಲಿನ ಕ್ರಮಸಂಖ್ಯೆ 1, 19 ಮತ್ತು 29 ತಾನು ದೃಢೀಕರಿಸಿರುವುದನ್ನು ಡಿ.ಡಬ್ಲ್ಯೂ–1 ರವರ ಪಾಟೀಸವಾಲಿನಲ್ಲಿ ಒಪ್ಪಿಕೊಂಡಿರುತ್ತಾರೆ. ಆ.ಸ.ನೌ–1 ರವರು ಸಲ್ಲಿಸಿದ ತನ್ನ ಲಿಖಿತ ಹೇಳಿಕೆಯಲ್ಲಿ ದಿನಾಂಕ 08.08.2012 ರಂದು ನಡೆದ ಸಾಮಾನ್ಯಸಭೆಯ ನಿರ್ಣಯವನ್ನು ತಾನು ಅನುಷ್ಠಾನಗೊಳಿಸಿರುವುದನ್ನು ಒಪ್ಪಿಕೊಂಡಿರುತ್ತಾರೆ. ಈ ಅಂಶವನ್ನು ಪರಿಶೀಲಿಸಿದಾಗ ದಿನಾಂಕ 08.08.2011 ರಂದು ಪಾಸು ಮಾಡಲಾದ **ನಿ.ಡಿ–2** ನಡಾವಳಿಯಂತೆ ತಾನು ಅನುಷ್ಠಾನಗೊಳಿಸಿರುವುದು ಹಾಗೂ ನಮೂನೆ 9 ಮತ್ತು 11 ನೀಡಿರುವುದು ಕಂಡುಬರುತ್ತದೆ. ಆ.ಸ.ನೌ–2 ರವರು ಸಹ ನಿಡಿ–14 ಸದರಿ ದಿನಾಂಕ 08.08.2011 ರಂದು ಪಾಸು ಮಾಡಲಾದ ಸಾಮಾನ್ಯಸಭೆಯ ನಡಾವಳಿ ಪ್ರತಿ ಹಾಜರ್‌ಪಡಿಸಿದ್ದು, ನಿ.ಡಿ–14(ಎ) ಷರಾ ಬರೆದಿರುವುದಾಗಿ ಹೇಳಿರುತ್ತಾರೆ. ಒಂದುವೇಳೆ, ಈ ಆ.ಸ.ನೌ–2 ರವರು ವಾದಿಸುವಂತೆ ಸದರಿ ನಡಾವಳಿಯು ಕಾನೂನುಬಾಹಿರವಾಗಿದ್ದಲ್ಲಿ ಅದಕ್ಕೆ ಸದರಿ ನಡಾವಳಿ ರದ್ದುಗೊಳಿಸುವ ಸಲುವಾಗಿ ತಕ್ಷಣವೆ ಕಾನೂನುಕ್ರಮ ಜರುಗಿಸಬೇಕಿತ್ತು, ಆದರೆ, ಈ ಬಗ್ಗೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ದಲ್ಲಿನ ಕಲಂ 55 ಗ್ರಾಮಪಂಚಾಯತಿಯ ನಡಾವಳಿಗಳ ಬಗ್ಗೆ ವಿವರಿಸಿದ್ದು ಕಲಂ 55(2) ಈ ಕೆಳಕಂಡಂತೆ ವ್ಯಾಖ್ಯಾನಿಸುತ್ತದೆ:–

**" ಗ್ರಾಮಪಂಚಾಯತಿಯು ಅಂಗೀಕರಿಸಿದ ಪ್ರತಿಯೊಂದು ನಿರ್ಣಯದ ಒಂದು ಪ್ರತಿಯನ್ನು ಸಭೆಯ ದಿನಾಂಕದಿಂದ 10 ದಿವಸದೊಳಗಾಗಿ ಕಾರ್ಯದರ್ಶಿಯು ಕಾರ್ಯನಿರ್ವಾಹಕ ಅಧಿಕಾರಿಗೆ ಕಳುಹಿಸಿಕೊಡತಕ್ಕದ್ದು "**

ಎಂದು ವ್ಯಾಖ್ಯಾನಿಸಿದ್ದು, ಆದರೆ ಈ ಆ.ಸ.ನೌ–1 ಮತ್ತು 2 ರವರು ಯಾವುದೇ ಕ್ರಮ ಜರುಗಿಸದೆ ತಟಸ್ಥರಾಗಿರುವುದು ಕಂಡುಬರುತ್ತದೆ. ಅಲ್ಲದೆ, ಸದರಿ ಷರಾಗೆ ಯಾವುದೇ ತಮ್ಮಗಳ ಸಹಿಯಾಗಲೀ ಮತ್ತು ದಿನಾಂಕವಾಗಲೀ ನಮೂದಿಸದೆ ಇರುವುದರಿಂದ ಹಾಗೂ ಸದರಿ ನಡಾವಳಿಯ ಬರಹದಲ್ಲಿ ಈ ಆ.ಸ.ನೌ–1 ಮತ್ತು 2 ರವರುಗಳು ತಕರಾರು ಸಲ್ಲಿಸಿರುವುದಾಗಿ ಉಲ್ಲೇಖಿಸದೆ ಇರುವುದರಿಂದ, ಈ ಷರಾಗೆ ಯಾವುದೇ ಕಾನೂನು ಮಾನ್ಯತೆ ಲಭ್ಯವಾಗದು. **ನಿ.ಡಿ–15** ದಿನಾಂಕ 09.03.2015

ರಂದು ಪಾಸುಮಾಡಲಾದ ನಡಾವಳಿಯ ಪ್ರತಿಯಾಗಿದ್ದು, ಇದರಲ್ಲಿ ನಿಡಿ–15 (ಎ) ದಾಖಲೆಗಳನ್ನು ನೀಡುವ ಬಗ್ಗೆ ಕಾರ್ಯದರ್ಶಿಗೆ ಅಧಿಕಾರ ನೀಡಿ ಸಾಮಾನ್ಯಸಭೆಯಲ್ಲಿ ಠರಾವು ಪಾಸು ಮಾಡಿದ್ದು, ಸದರಿ ಠರಾವು ಪಾಸುಮಾಡಿದ ಮಾತ್ರಕ್ಕೆ ಆ.ಸ.ನೌ–2 ರವರ ಕರ್ತವ್ಯದಲ್ಲಿ ನಿಯಮಾನುಸಾರ ವ್ಯತ್ಯಾಸವಾಗುವುದಿಲ್ಲ. ಒಂದುವೇಳೆ, ಸದರಿ ಠರಾವು ಕಾನೂನುಬಾಹಿರವಾಗಿದ್ದಲ್ಲಿ ಅದನ್ನು ರದ್ದುಗೊಳಿಸಲು ಸೂಕ್ತ ಕಾನೂನುಕ್ರಮ ಜರುಗಿಸುವ ಜವಾಬ್ದಾರಿ ಆ.ಸ.ನೌ–2 ರವರದ್ದಾಗಿದ್ದು, ಇವರು ಯಾವುದೇ ಕ್ರಮಜರುಗಿಸದೆ ಇರುವುದು ಸಹ ಕಂಡುಬರುತ್ತದೆ.

26) ಆ.ಸ.ನೌ–1 ಮತ್ತು 2 ರವರು ಜವಾಬ್ದಾರಿಯುತ ಸರ್ಕಾರಿ ನೌಕರರಾಗಿದ್ದು, ಸರ್ಕಾರದ ನಿಯಮಾನುಸಾರ ಸಾರ್ವಜನಿಕರಿಗೆ ಸೇವೆ ಸಲ್ಲಿಸಬೇಕಾಗಿದ್ದು, ಸರ್ಕಾರಿ ಸುತ್ತೋಲೆಯಂತೆ ಕೃಷಿ ಜಮೀನಿನಲ್ಲಿ ಕೃಷಿಯೇತರ ಉದ್ದೇಶಕ್ಕಾಗಿ ಭೂಪರಿವರ್ತನೆ ಆದೇಶ ಸೂಕ್ತ ಪ್ರಾಧಿಕಾರದಿಂದ ಹೊರಡಿಸಿದ ನಂತರವೆ ನಿಯಮಾನುಸಾರ ವರ್ಗಾಯಿಸಬೇಕಾಗಿದ್ದು, ಈ ಬಗ್ಗೆ ಈ ಆ.ಸ.ನೌ ರವರುಗಳಿಗೆ ಮಾಹಿತಿ ಇದ್ದಾಗ್ಯೂ, ಪಂಚಾಯತಿ ಸಾಮಾನ್ಯ ಸಭೆಯಲ್ಲಿ ನಡಾವಳಿ ಪಾಸು ಮಾಡಿರುತ್ತಾರೆಂಬ ಒಂದೇ ಉದ್ದೇಶದಿಂದ, ನಿವೇಶನಗಳನ್ನು ಸಂಬಂಧಪಟ್ಟ ವಹಿಗಳಲ್ಲಿ ನಮೂದಿಸಿ, ಅವುಗಳು ನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿಯಾಗಲು ಅವಕಾಶ ಕಲ್ಪಿಸಿರುವುದು ಕಂಡುಬರುತ್ತದೆ. ಈ ಆ.ಸ.ನೌ–2 ರವರು ಈ ನಮೂದನೆಗಳನ್ನು ಆ.ಸ.ನೌ–1 ರವರೆ ಮಾಡಿರುವುದಾಗಿ ಹೇಳಿರುತ್ತಾರೆ. ಆದರೆ, ನಿ.ಡಿ–5 ಮತ್ತು 6 ಕಂದಾಯ ರಶೀದಿ ಮತ್ತು ದೃಢಿಕರಣ ಪತ್ರವನ್ನು ಪರಿಶೀಲಿಸಿದಾಗ, ಈ ಆ.ಸ.ನೌ–2 ರವರೆ ಸಹಿ ಮಾಡಿ ನೀಡಿರುವುದು ರುಜುವಾತಾಗುತ್ತದೆ. ಈ ಆ.ಸ.ನೌ–2 ರವರು ಗ್ರಾಮಪಂಚಾಯತಿಯಲ್ಲಿನ ಹಿರಿಯ ಅಧಿಕಾರಿಯಾಗಿದ್ದು, ಗ್ರಾಮಪಂಚಾಯತಿಗೆ ಸಂಬಂಧಪಟ್ಟ ಎಲ್ಲಾ ಕರ್ತವ್ಯಗಳನ್ನು ನಿರ್ವಹಿಸಲು ಜವಾಬ್ದಾರರಾಗಿದ್ದು, ತಾನು

ಈ ಜವಾಬ್ದಾರಿಯುತ ಕರ್ತವ್ಯವನ್ನು, ನಿಷ್ಠೆಯಿಂದ, ಪ್ರಮಾಣಿಕವಾಗಿ ನಿರ್ವಹಿಸುವಲ್ಲಿ ವಿಫಲರಾಗಿರುವುದು ಕಂಡುಬರುತ್ತದೆ. ಆ.ಸ.ನೌ–1 ಮತ್ತು 2 ರವರ ಈ ರೀತಿಯ ದುರ್ವರ್ತನೆಯಿಂದಲೆ ಈ ಅಕ್ರಮ ಖಾತಾಗಳನ್ನು ಸಂಬಂಧಪಟ್ಟ ದಾಖಲೆಗಳಲ್ಲಿ ನಮೂದಿಸಿ ಅವಶ್ಯಕ ದಾಖಲೆಗಳನ್ನು ನೀಡಿದ ಆಧಾರದ ಮೇಲೆ ಅವುಗಳು ನೊಂದಣಿಯಾಗಲು ಸಹಕರಿಸಿರುತ್ತಾರೆಂಬುದು ತಿಳಿದುಬರುತ್ತದೆ. ಸದರಿ ನಮೂದನೆಗಳು ಅಕ್ರಮವೆಂದು ಕಂಡು ಬಂದ ನಂತರ ಹಾಗೂ ಈ ಲೋಕಾಯುಕ್ತ ಸಂಸ್ಥೆಯಲ್ಲಿ ಕೇಸು ದಾಖಲಾದ ನಂತರ ಈ ಅಕ್ರಮ ಖಾತಾಗಳನ್ನು ರದ್ದುಗೊಳಿಸಿರುವುದು ಕಂಡುಬರುತ್ತದೆ. ಈ ರೀತಿ ಆ.ಸ.ನೌ–1 ಮತ್ತು 2 ರವರು ತೋರಿದ ದುರ್ನಡತೆ ಹಾಗೂ ಕರ್ತವ್ಯಲೋಪದಿಂದಲೆ ಈ ಪ್ರಮಾದವಾಗಲು ಸಾಧ್ಯವಾಗಿರುತ್ತದೆಂದು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ವಾದಿಸಿರುತ್ತಾರೆ.

27) ಈ ಎಲ್ಲಾ ಕಾರಣಗಳಿಂದ ಶಿಸ್ತು ಪ್ರಾಧಿಕಾರದವರು ಆ.ಸ.ನೌ–1 **ಶ್ರೀ ಪ್ರಸಾದ್,** ಕಾರ್ಯದರ್ಶಿ, ಕಲ್ಕುಂಟೆ ಗ್ರಾಮ ಪಂಚಾಯಿತಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಆ.ಸ.ನೌ–2 ಶ್ರೀಮತಿ. **ಶೃತಿ,** ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಲ್ಕುಂಟೆ ಗ್ರಾಮಪಂಚಾಯತಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರುಗಳ ವಿರುದ್ಧ ಹೊರಿಸಲಾದ ಆಪಾದನೆ ದುರ್ನಡತೆ ಮತ್ತು ಕರ್ತವ್ಯಲೋಪಗಳನ್ನು ರುಜುವಾತುಪಡಿಸುವಲ್ಲಿ ಯಶಸ್ವಿಯಾಗಿರುತ್ತಾರೆಂದು ನಿರ್ಣಯಿಸಲಾಗಿದೆ. ಅಲ್ಲದೇ, ಶಿಸ್ತು ಪ್ರಾಧಿಕಾರದವರು ನೀಡಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಗಳು ಆ.ಸ.ನೌ.–1 ಮತ್ತು 2 ರವರುಗಳು ಕರ್ತವ್ಯಲೋಪ ಮತ್ತು ದುರ್ನಡತೆ ಎಸಗಿರುವುದು ರುಜುವಾತಾಗುತ್ತದೆ. ಈ ಎಲ್ಲಾ ಕಾರಣಗಳಿಂದ ಅಂಶ 1 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

**ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.**

## ಆದೇಶ

ಶಿಸ್ತು ಪ್ರಾಧಿಕಾರದವರು ಆ.ಸ.ನೌ–1 **ಶ್ರೀ ಪ್ರಸಾದ್,** ಕಾರ್ಯದರ್ಶಿ, ಕಲ್ಕುಂಟೆ ಗ್ರಾಮ ಪಂಚಾಯಿತಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಆ.ಸ.ನೌ–2 ಶ್ರೀಮತಿ. **ಶೃತಿ,** ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಕಲ್ಕುಂಟೆ ಗ್ರಾಮಪಂಚಾಯತಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರುಗಳ ವಿರುದ್ಧ ಹೊರಿಸಲಾದ **ಆರೋಪವನ್ನು ರುಜುವಾತುಪಡಿಸಲಾಗಿದೆ ಎಂದು ನಿರ್ಣಯಿಸಲಾಗಿದೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ–2 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

ಬೆಂಗಳೂರು
ದಿನಾಂಕ 07.12.2020.

(ಸೆಲ್ವಕುಮಾರ್.ಸಿ)
ಅಪರ ನಿಬಂಧಕರು ವಿಚಾರಣೆಗಳು–16,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

# PHERIST

| Particulars of Documents |
|---|
| **Witness examined on behalf of the Disciplinary Authority** |
| **PW-1**: Sri.Shankar, dt. 06/08/2019 (original) |
| **Documents marked on behalf Disciplinary Authority (Ex.P1 to Ex.P.10)** |
| **Ex.P-1:** Complaint of complainant dated 31/10/2014 (Xerox) |
| **Ex.P-2:** Form No. I (Complaint) dated 31/10/2014 (Xerox). |
| **Ex.P-3 :** Form No. II (Affidavit) dated 31/10/2014 (Xerox). |
| **Ex.P-4:** Letter (complaint) of complainant addressed to Executive Officer, Taluk Panchayath, Bengaluru Rural District (xerox). |
| **Ex.P-5:** DGO-2 addressed a letter to Executive Officer, Taluk Panchayath, Hoskote regarding fake khatha (Xerox) |
| **Ex.P-6**: Information Under RTI regarding the entries of private persons in the Panchayath demand register obtained 20 sheets (Xerox) |
| **Ex.P.7:** Pahani Pathrike of Sy. No. 101/2 (Xerox) |
| **Ex.P.8:** Phani Pathrike of Sy. 101/3 (Xerox) |
| **Ex.P.9**: Rejoinder of complainant (original) |
| **Ex.P.10**: Government circular dated: 04/01/2013 regarding controlling of illegal properties registration in Gram Panchayath Limits (6sheets). (Xerox) |

| **Witness examined on behalf of the DGO** |
|---|
| **DW-1:** Sri. **Prasad,** Secretary, Kalkunte Grama panchayathi, Hoskote Taluk, Bengaluru Rural District dated: 05/02/2020. (Original) |
| **DW-2:** Sri. Smt.**H.C. Shruthi**, Panchayath Development Officer, Kalkunte Grama Panchayathi, Hoskote Taluk, Bengaluru Rural District dated: 23/11/2020. (Original) |
| **Documents marked on behalf of the DGOs** |
| **Ex. D-1** : Official Memorandum dated: 20/07/2011 of Executive Officer, regarding report of duty on 20/07/2011 A/N. ( Xerox ) |
| **Ex. D-2 :** Certified copy of the resolution passed on 08/08/2011 (4 sheets). (certified xerox copy) |
| **Ex. D-3 :** Certified copy of the resolution passed on 09/03/2012 regarding power issued to Secretary regarding issue of copy of khatha (8 sheets). (certified xerox copy) |
| **Ex.D-4:** Certified copy of the resolution passed on 08/08/2011 in page no. 13 PDO herself written shara and signed it (13 sheets). (certified xerox copy) |
| **Ex. D-5:** House Tax receipt dated:02/05/2012 in the name of B.Raju, C.M. Krishnamurthy and P. Lakshminarayana. (xerox copy) |
| **Ex. D-6:** Certified certificate dated: 02/08/2012 issued by DGO-2 regarding disputed site No. 26 of Arehalli village. (Xerox copy) |
| **Ex. D-7:** DGO-2 issued From No.12 in respect of B.Raju, C.M. Krishnamurthy and P. Lakshminarayana. (Xerox copy) |

| | |
|---|---|
| **Ex. D-8:** | Certified copy of the stock register extract showing at sl. No. 18 the Tax receipt Book bearing No. 15268 is with DGO-2 (3 sheets ) ( Certified Xerox copy) |
| **Ex. D-9:** | Certified xerox copy of the Audit report for the year 2012-13 pertains to Kalkunte Agrahara Gram Panchayath (4 Sheets ) ( Certified Xerox copy) |
| **Ex. D-10:** | Certified copy of the letter dated: 27/03/2012 issued by PDO to Secretary regarding power issued to Secretary and to work within the Frame work of Law. ( Certified Xerox copy) |
| **Ex. D-11:** | Government order dated: 04/01/2012 regarding distribution of work to PDO and Secretaries. (Xerox copy) |
| **Ex. D-12:** | Certified copy of the letter dated: 18/01/2013 issued by EO, Taluk Panchayath, Hosakote addressed to President Kalkunte Gram Panchayath. (Xerox certified copy) |
| **Ex. D-13:** | Certified copy of the Enquiry Notice dated: 07/08/2014 of EO, Taluk Panchayath, Hosakote issued to PDO, Kalkunte Gram Panchayath regarding forged signature of PDO. (Xerox certified copy) |
| **Ex. D-14:** | Certified copy of the proceedings of General body meeting dated 08.08.2011 of Kalkunte Gram Panchayath resolution regarding issue of Khatha to 86 sites at Sy. No. 100 and 101. (Xerox certified copy) |
| **Ex. D-14(a)**: | In page 3 of the resolution dated 08.08.2011 of Kalkunte Gram Panchayath DGO-2 informed that issuing khatha to 86 sites at Sy. No. 100 and 101 is illegal, the shara at page No.3. |

| | |
|---|---|
| **Ex. D-15:** | Certified copy of the resolution of General body meeting dated 09.03.2012 of Kalkunte Gram Panchayath regarding the power vested to Secretary to issue of Khatha (Xerox certified copy) |
| **Ex. D-15(a):** | Certified copy of resolution dated 09.03.2012 in subject No. 9 the shara regarding the power vested to Secretary to issue of khatha. (Xerox certified copy) |
| **Ex. D-16:** | Certified copy of the letter written by DGO-2 to Executive Officer, Taluk Panchayath, Hoskote dated 08.07.2014 regarding issue of Form No. 1 and 12 (09 and 11) by forging her signature. (Xerox certified copy) |
| **Ex. D-17:** | Comments of DGO-2 dated 22/10/2016. (Original) |
| **Ex. D-18:** | Certified copy of the resolution 12.07.2017 of Kalkunte Gram Panchayath regarding cancelation of khatha in Sy. No. 3, 101/2 and 101/3 without conversion of land. (Xerox certified copy) |
| **Ex. D-18(a):** | Certified copy of the letter dated 03.11.2017addressed to Executive Officer, Taluk Panchayath, Hoskote by DGO-2 stating that in General Body meeting resolution is passed for cancellation of khathas (Xerox certified copy) |
| **Ex. D-19:** | Certified copy of the letter dated 02.11.2017addressed to Executive Officer, Taluk Panchayath, Hoskote by CEO, Bengaluru Rural Zilla Panchayath to take appropriate action against DGO-1 and to cancel the khathas. (Xerox certified copy) |

| | |
|---|---|
| **Ex. D-20:** | Certified copy of the resolution dated 18.09.2018 regarding without conversion of land, the khathas pertains to Harehally Sy. No. 03, 101/2 and 101/3 have been cancelled. (Xerox certified copy) |

(SELVA KUMAR.C)
Additional Registrar Enquiries-16
Karnataka Lokayukta
Bangalore.

Bengaluru,
Dated 07.12.2020.